ವಾರದ ಮುಂಗಾರು

ಭಾನುವಾರ 8-1-1989



ಅಣುಸ್ಥಾವರದ ಹಿನ್ನೆಲೆಯಲ್ಲಿ ನಿಂತಿರುವ ಭೂತ-ವಿಷ ವಿಕಿರಣದ ಮೃತ್ಯು ನರ್ತನಕ್ಕೆ ತಡೆಯೊಡ್ಡುವ ತಂತ್ರಜ್ಞಾನದ ಬಗ್ಗೆ ವಿಜ್ಞಾನಿಗಳು ಹೇಳುತ್ತಿರುವ ಸಬೂಬುಗಳು ಜನರಲ್ಲಿ ಅಣುಸ್ಥಾವರಗಳ ಬಗ್ಗೆ ಸಂಶಯಗಳ ಅಲೆ ಎಬ್ಬಿಸಿವೆ.

ಕೈಗಾ ಮಾಡುವ ಮುನ್ನ ಕಟ್ಟಕಡೆಯದಾಗಿ ಮತ್ತೊಮ್ಮೆ ನಾವು ಕತ್ತು ಹಿಂತಿರುಗಿಸಿ ನೋಡಬೇಕಿದೆ. ಮೂರು ವರ್ಷಗಳ ಕೆಳಗೆ ರಷ್ಯಾದ ಚೆರ್ನೋಬೈಲ್‌ನ ಅಣುಸ್ಥಾವರದಿಂದ ಹೊರ ಜಗತ್ತಿಗೆ ನೆಗೆದ ವಿಕಿರಣದ ವಿಷವಾಯು ಸಾವಿರಾರು ಮಂದಿಯ ಜೀವತೆಗೆದು ಪ್ರಳಯ ನೃತ್ಯಗೈದ ನೆನಪುಗಳನ್ನು ಕೆದಕಬೇಕಿದೆ. ಪ್ರಸಕ್ತ ಜನಾಂಗದ ಪ್ರಗತಿಯ ಹೆಸರಿನಲ್ಲಿ ಭವಿಷ್ಯದ ಜನಾಂಗದ ಬದುಕುವ ಹಕ್ಕನ್ನು ಕಸಿಯುವ ಅಧಿಕಾರ ನಮಗಿದೆಯೆ?

ಅಮೇರಿಕದಿಂದ ಚೆರ್ನೋಬೈಲ್‌ಗೆ ಧಾವಿಸಿದ



ಡಾ|| ಗೇಲ್‌ರ ಭಯಾನಕ ಅನುಭವ

ರಾಧಾಕೃಷ್ಣ ಕಶ್ಯಪ್

ಅಣು ಸ್ಥಾವರವೊಂದರಿಂದ ವಿಕಿರಣ ಸೋರುವಿಕೆಯುಂಟಾದಾಗ ಪರಿಸರಕ್ಕುಂಟಾಗುವ ತೊಡಕುಗಳು ಹಲವಾರು. ಕಣ್ಣಿಗೆ ಕಾಣದ, ಅಗೋಚರವಾದ ಈ ಕಿರಣ ಪುಂಜ ಶರೀರದ ಮೂಲಕ ಮಾನವನಿಗೆ ಅರಿವಿಲ್ಲದೆ ಹಾದು ಹೋದಾಗ ಅಲ್ಲಿನ ಜೀವಕೋಶಗಳಿಗೆ ಹಾನಿಯುಂಟು ಮಾಡುತ್ತದೆ. ಶರೀರದ ಮೂಲಕ ಹಾದು ಹೋದ ಕಿರಣವನ್ನವಲಂಭಿಸಿ (ಇದನ್ನು ರೆಮ್‌ಗಳಲ್ಲಿ ಅಳೆಯುತ್ತಾರೆ). ತಲೆ ಕೂದಲು ಸಂಪೂರ್ಣ ಉದುರಿಹೋಗುವುದರಿಂದ—ವಿಕಲಾಂಗ ಶಿಶುಗಳಿಗೆ ಜನನವೀಯುವ ವರೆಗೆ ಥಟ್ಟನೆ ಸಾವಿನಿಂದ–ಹಲವಾರು ವರ್ಷಗಳ ಬಳಿಕ ಕ್ಯಾನ್ಸರ್ ಸಾವಿನ ವರೆಗೆ, ಇವುಗಳ ವಿಧ್ವಂಸಕಾರೀ ಶಕ್ತಿ ಕೆಲಸಮಾಡಬಹುದು. ಅಲ್ಲದೆ ಸುತ್ತ ಮುತ್ತಲ ಪ್ರದೇಶವೆಲ್ಲ ವಿಕಿರಣ ಪೂರಿತವಾಗಿ ಬಿಡುವುದರಿಂದ ವಾಸಕ್ಕೂ ಅನರ್ಹವಾದ ಆ ಪ್ರದೇಶ ಮುಂದೆ 25,000 ವರ್ಷಗಳವರೆಗೂ ಅದೇ ಸ್ಥಿತಿಯಲ್ಲಿ ಮುಂದುವರಿಯುವುದು.

ಅಣು ವಿಕಿರಣ ಸೋರಿದಾಗ ಐದು ಹಂತಗಳಲ್ಲಿ ಸಾವು ಸಂಭವಿಸುತ್ತದೆ. ಪ್ರತಿ ಹಂತವೂ ಮೊದಲ ಹಂತಕ್ಕಿಂತ ಹೆಚ್ಚಿನ ಜನತೆಯಲ್ಲಿ ಸಾವು ತರುತ್ತದೆ. ಭಾರೀ ಪ್ರಮಾಣದ ವಿಕಿರಣ ಶರೀರ ಹಾದೊಡನೆ (ಸುಮಾರು 5,000 ರೆಮ್‌ಗಳು) ಕೇಂದ್ರ ನರವ್ಯೂಹ ಥಟ್ಟನೆ ನಾಶಗೊಳ್ಳುವುದರಿಂದ ಕೆಲವೇ ನಿಮಿಷ ಅಥವಾ ಗಂಟೆಗಳಲ್ಲಿ ಸಾವು ಸಂಭವಿಸುವುದು—ಇದು ಮೊದಲ ಹಂತ. ಇದಕ್ಕಿಂತ ಕೊಂಚ ಕೆಳಮಟ್ಟದ ವಿಕಿರಣ ಶರೀರದಲ್ಲಿ ಹಾಯಿಸಿಕೊಂಡವರು ಈ ಸಾವಿನಿಂದ ಮುಕ್ತವಾದರೂ ಜಠರ-ಕರುಳಿನಲ್ಲುಂಟಾದ ಹಾನಿಯಿಂದಾಗಿ ವಿಕಿರಣಕ್ಕೊಳಗಾದ ಒಂದು ಅಥವಾ ಎರಡು ವಾರದಲ್ಲಿ ಮರಣ ಹೊಂದುವರು. ಹಸಿವಿನ ನಾಶ, ಓಕರಿಕೆ, ವಾಂತಿ ಬೇಧಿ, ಕರುಳಿನ ಸೆಳೆತ, ಬಾಯಲ್ಲಿ ಅತಿಯಾಗಿ ನೀರೂರುವಿಕೆ, ದೇಹ ತನ್ನ ಜಲಾಂಶ ಕಳಕೊಳ್ಳುವುದು, ದೇಹ ತೂಕ ಕಳಕೊಳ್ಳುವಿಕೆ ಇತ್ಯಾದಿ ತೊಂದರೆಗಳಿಂದ ಮೃತ್ಯು ಬರುತ್ತದೆ. ಸುಸ್ತು, ನಿರಾಸಕ್ತಿ, ಹೆಚ್ಚು ಬೆವರುವಿಕೆ, ಜ್ವರ, ತಲೆ ನೋವು, ಒತ್ತಡವಿಳಿಕೆ ಇತ್ಯಾದಿ ತೊಂದರೆಗಳನ್ನು ಸೇರಿಸಿ ಒಟ್ಟಾಗಿ ಈ ಲಕ್ಷಣಗಳನ್ನು 'ವಿಕಿರಣ ವ್ಯಾಧಿ' ಎನ್ನುತ್ತಾರೆ.

ಮೂರನೆಯ ಸಾವು ಕರುಳಿನ ಹಾನಿಗೊಳಗಾಗದವರಿಗೆ—ಅದನ್ನು ಗುಣಪಡಿಸಿಕೊಂಡವರಿಗೆ ಬರುವಂತಹದು. ದೇಹದಲ್ಲಿ ಬಿಳಿ ಕೆಂಪು ರಕ್ತ ಕಣಗಳನ್ನು ಉತ್ಪಾದಿಸುವ ಎಲುಬಿನ ಮಜ್ಜೆಗೆ ಹಾನಿಯುಂಟಾಗಿ, ಅಗತ್ಯ ಪ್ರಮಾಣದಲ್ಲಿ ರಕ್ತ ಕಣಗಳ ಉತ್ಪಾದನೆಯಾಗದೆ ದೇಹ ರೋಗ ನಿರೋಧಕ ಶಕ್ತಿ ಕಳಕೊಳ್ಳಬಹುದು. ಈ ಪರಿಸ್ಥಿತಿ ದೇಹಕ್ಕೆ ಏಡ್ಸ್ ರೋಗ ತಗಲಿದಾಗ

ರಕ್ತದ ಕ್ಯಾನ್ಸರ್ ಉಂಟಾದಾಗ ಉದ್ಭವಗೊಳ್ಳುವ ಸ್ಥಿತಿ ನವಾಗಿರುತ್ತದೆ. ಚರ್ಮದಡಿಯಲ್ಲಿ ಒಳಾಂಗ ಲ್ಲಿ ರಕ್ತ ಸೋರಿ ಮನುಷ್ಯ ಸಾಯುತ್ತಾನೆ.

ಈ ಮೂ ಅಲೆಯ ಸಾವುಗಳಾದ ಬಳಿಕವೇ ನಾಲ್ಕು ಮತ್ತು ನೇ ಹಂತದ ಸಾವುಗಳಾಗುತ್ತವೆ. ನಿರ್ಧಾರವಾಗಿ ಈ ಹಂತಗಳ ಸಾವಿಗೆ ನಿರ್ದಿಷ್ಟವಾಗಿ ಇಂತಹ ವಿಕಿರಣ ಸೋರುವಿಕೆಯೇ ಕಾರಣ ಎಂದು ಹೇಳಲಾಗದು. ಮೊದಲು ಮಕ್ಕಳಲ್ಲಿ ಆರಂಭಗೊಂಡ ರಕ್ತದ ಕ್ಯಾನ್ಸರ್ ದಶಕದ ಹತ್ತಿರದಲ್ಲಿ ಉತ್ತುಂಗ ಶಿಖರವೇರಿ ಕಡಿಮೆಯಾಗುತ್ತದೆ. 25 ವರ್ಷಗಳ ಕೊನೆಯಲ್ಲಿ ತನ್ನ ಭೀಕರತೆ ಕಡಿಮೆಗೊಳಿಸುತ್ತಿರುತ್ತದೆ, ಆಗಷ್ಟೆ ಕೊನೆಯ ಸಾವಿನಲೆಯು ಹೊಡೆತ ಆರಂಭಗೊಂಡಿರುತ್ತದೆ. ಕೇವಲ ಆರು ರೆಮ್‌ಗಳಷ್ಟು ವಿಕಿರಣ ಏಟನ್ನು ದೇಹ ಹಾಯಿಸಿಕೊಂಡಿದ್ದರೂ ಈ ಕ್ಯಾನ್ಸರ್ ಬರಬಹುದು, ಎದೆ, ಥೈರಾಯ್ಡ್, ಶ್ವಾಸಕೋಶ ಜಠರ, ಮೂಳೆ, ದೊಡ್ಡ ಕರುಳು, ಮೂಳೆ, ಅನ್ನನಾಳ, ಸಣ್ಣ ಕರುಳು, ಮೂತ್ರಕೋಶ, ಮೇದೋಜೀರಕ ಗ್ರಂಥಿ, ಗುದನಾಳ, ಹಾಲ್ರಸಗ್ರಂಥಿ—ಹೀಗೆ ದೇಹದ ಒಳಾಂಗಗಳಲ್ಲಿ ಚಿಕಿತ್ಸೆಗೆಯ್ಯಲಾಗದ ಕ್ಯಾನ್ಸರ್ ತಲೆದೋರುವುದು. ಈ ಕೊನೆಯ ಸಾವಿನಲೆಯು ಕೊನೆ? ತಿಳಿದಿಲ್ಲ. ಅಣುಬಾಂಬ್ ಸಿಡಿದ 40 ವರ್ಷಗಳ ಬಳಿಕವೂ ಹಿರೋಶಿಮಾದಲ್ಲಿ ಇಂದಿಗೂ ಕ್ಯಾನ್ಸರ್‌ಗೆ ಬಲಿಬೀಳುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅಂದರೆ 2026ನೇ ಇಸವಿಯ ಬಳಿಕವೂ ಚೆರ್ನೋಬೈಲ್ ಜನರನ್ನು ಕೊಲ್ಲುತ್ತಲೇ ಇರುತ್ತದೆ. ಒಂದು ಅಣು ಸೋರುವಿಕೆಯಲ್ಲಿ ಎಷ್ಟು ಜನ ಸಾವನ್ನಪ್ಪಬಹುದು? ಪ್ರಪಂಚದೆಲ್ಲೆಡೆ ರಚಿತಗೊಂಡ ಆಯೋಗಗಳು ನಿಜಸಂಖ್ಯೆ ಜನತೆಗೆ ತಿಳಿಸದೆ, ಜನತೆಯ ಮನ ಒಪ್ಪುವ ಅಂಕಿ ಸಂಖ್ಯೆಗಳನ್ನಷ್ಟೆ ಬಿಡುಗಡೆ ಮಾಡುತ್ತವೆ. ಬ್ರಿಟನ್ ಆಯೋಗ ಒಂದರ ಅಂಕಿ ಸಂಖ್ಯೆ ಪ್ರಕಾರ ಸುಮಾರು 30.000 ಜನ ಮರಣಿಸಬಹುದು. ಆದರೆ ನಿಜವಾಗಿ ಅದಕ್ಕೂ ಹಲವಾರು ಪಟ್ಟು ಹೆಚ್ಚು ಜನ ಸಾವನ್ನಪ್ಪಬಹುದು. ವಿಶ್ವದೆಲ್ಲೆಡೆ ಅಣುವಿದ್ಯುತ್ ಬೆಂಬಲಿಸುವವರು ಇದು ಪರಿಶುದ್ಧವಾದ ವಿದ್ಯುತ್ ಎಂದೂ, ಸ್ಥಾವರಗಳಿಂದ ಜನತೆಗೆ ಯಾವ ಹಾನಿಯೂ ಇಲ್ಲವೆಂದೂ, ಅದನ್ನು ನಿಯಂತ್ರಣದಲ್ಲಿಡುವ ಶಕ್ತಿ, ತಂತ್ರಜ್ಞಾನ ಮಾನವನ ಕೈಯಲ್ಲಿದೆಯೆಂದು ಸಾರುತ್ತಿದ್ದಂತೆ ಏಪ್ರಿಲ್ 25 1986ರ ರಾತ್ರಿ



ಅಭೂತಪೂರ್ವ ಮುನ್ನೆಚ್ಚರಿಕೆ

ಚೆರ್ನೋಬೈಲ್ ದುರಂತದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಹೊರಟ ಡಾಕ್ಟರುಗಳು ತಮ್ಮ ರಕ್ಷಣೆಗಾಗಿ ಭಾರೀ ಮುನ್ನೆಚ್ಚರಿಕೆಗಳನ್ನೇ ಕೈಗೊಳ್ಳಬೇಕಾಯಿತು. ವಿಕಿರಣದ ಸ್ಪರ್ಶ ಮಾತ್ರವೂ ತಮಗೆ ತಗುಲದಂತೆ ವೈದ್ಯರು ಮೈಯೆಲ್ಲ ಕಣ್ಣಾಗಿ ಚಿಕಿತ್ಸೆ ನೀಡಬೇಕಾಯಿತು.

ಚೆರ್ನೋಬೈಲ್ ರೋಗಿಗಳಿದ್ದ ಕೊಠಡಿಯೊಳಗೆ ತೆರಳುವ ಮುನ್ನ ಡಾ। ಗೇಲ್ ಹಾಗೂ ಅವರ ಸಂಗಡಿಗರು ನೀಲಿ ಸಮವಸ್ತ್ರ ಧರಿಸಿದರು. ಮುಖವಾಡ ತೊಟ್ಟು, ಎಲ್ಲರ ಶೂಗಳಿಗೂ ಹೊರಕವಚ ತೊಟ್ಟುಕೊಂಡರು! ಅಲ್ಲಿಂದ ವೈದ್ಯರ ತಂಡ ಕ್ರಿಮಿಶುದ್ಧಿಕಾರಕ ಕೊಠಡಿಗಳಿಗೆ ತೆರಳಿತು. ಪ್ಲಾಸ್ಟಿಕ್ ಗೋಡೆಗಳಿರುವ ಈ ವಿಶೇಷ ಕೊಠಡಿಗಳಿಗೆ 'ಜೀವದ್ವೀಪ'ಗಳೆನ್ನುತ್ತಾರೆ. ರೋಗಿಗಳ ತಪಾಸಣೆ ನಡೆಸುವ ಮುನ್ನ ಅವರ ರಕ್ಷಣೆಗಾಗಿ ವೈದ್ಯರ ತಂಡ ಮತ್ತೊಂದು ವಿಶೇಷ ಕವಚ ತೊಟ್ಟುಕೊಂಡಿತು. ಯಾಕೆಂದರೆ ಅವರ ಮೊದಲ ರೋಗಿ ಒಬ್ಬ ಅಗ್ನಿಶಾಮಕದಳದವ. ವಿಕಿರಣಪೂರಿತ ನೀರನ್ನು ಕೈಯಲ್ಲಿ ಮುಟ್ಟಿದ್ದರಿಂದ ಅವನ ಕೈಗಳೆರಡೂ ಸಂಪೂರ್ಣ ಬೆಂದುಹೋಗಿದ್ದವು. ಎದೆ ಮತ್ತು ಕಾಲುಗಳಲ್ಲಿನ ಚರ್ಮ ಅಲ್ಲಲ್ಲಿ ಸುಟ್ಟು ಸುರುಟಿಕೊಂಡಿತ್ತು.

ಚೆರ್ನೋಬೈಲ್: ಒಂದು ನೋಟ

1-26ಕ್ಕೆ ರಷ್ಯಾದ ಚೆರ್ನೋಬೈಲ್ ನಾಲ್ಕು ಸ್ಥಾವರಗಳಲ್ಲಿ. ನಂ. 4ನೇ ಸ್ಥಾವರ ಕಾರ್ಯನಿರ್ವಹಿಸುತ್ತಿದ್ದಾಗ ಉಂಟಾದ ಸಣ್ಣ ಪ್ರಮಾದದಿಂದ ಸ್ಫೋಟಗೊಂಡಿತು. ಹೊರಹೊಮ್ಮಿದ ಅಣು ಬೂದಿ ಮೋಡದಂತೆ ಗಾಳಿ ಬಂದೆಡೆ ರಷ್ಯಾದಲ್ಲಷ್ಟೇ ಅಲ್ಲದೆ ಅದಕ್ಕೆ ತಾಗಿಕೊಂಡಂತಿರುವ ಪಶ್ಚಿಮ ಯೂರೋಪ್ ರಾಷ್ಟ್ರಗಳಿಗೂ ಹರಡಿ ಜನತೆಯ ಎದೆ ನಡುಗಿಸಿತು. ಶಕ್ತಿಶಾಲಿ ರಾಷ್ಟ್ರವಾದ ರಷ್ಯಾಕ್ಕೂ ಈ ಪರಿಸ್ಥಿತಿಯಲ್ಲಿ ಏನೂ ಮಾಡಲು ತಿಳಿಯದೆ ಕೈಕಟ್ಟಿ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಏರ್ಪಟ್ಟಿತು. ಆದರೂ ಹಲವಾರು ದಿನ ಹೋರಾಡಿ ಛಿದ್ರಗೊಂಡ ಸ್ಥಾವರವನ್ನು ಅಂತೆಯೇ ಭದ್ರವಾಗಿ ಭೂಮಿಯ ಮೇಲೆಯೇ ಸಿಮೆಂಟ್, ಸೀಸ ಮತ್ತಿತರ ಸಾಮಗ್ರಿಗಳನ್ನು ಉಪಯೋಗಿಸಿ ಮುಚ್ಚಿಬಿಡಲಾಯಿತು. ಚೆರ್ನೋಬೈಲ್ ಸುತ್ತುಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿದ್ದ ಸುಮಾರು 35,000 ಜನರನ್ನು ಕೂಡಲೇ ಸ್ಥಳಾಂತರಿಸಲಾಯಿತು. ರಷ್ಯಾದ ಗಡಿಗೆ ಹೊಂದಿಕೊಂಡ ದೇಶಗಳಿಂದ ಉಳಿದ ದೇಶಗಳು ಹಾಲು ಮತ್ತಿತರ ಡೈರಿ ಉತ್ಪಾದನೆಗಳಿಗೆ, ತರಕಾರಿಗಳಿಗೆ ನಿಷೇಧ ಹೇರಿದ್ದರಿಂದ ಆ ದೇಶಗಳು ಆರ್ಥಿಕವಾಗಿಯೂ ನಷ್ಟ ಅನುಭವಿಸಿದವು. ಪ್ರಪಂಚದ ಇತಿಹಾಸದಲ್ಲಿಯೆ ಮೊಟ್ಟ ಮೊದಲ ಬಾರಿಗೆ ಒಂದು ದೇಶದಲ್ಲುಂಟಾದ ಅಣು ವಿಕಿರಣ ಸೋರುವಿಕೆ ಇತರ ದೇಶಗಳಲ್ಲೂ ಹಾದು ದಾಂಧಲೆ ಎಬ್ಬಿಸಿತು.

ಈ ಸಮಯದಲ್ಲಿ ತನ್ನ ಬಿಗಿ ನೀತಿ ಸಡಿಲಿಸಿ ರಷ್ಯಾ ಸ್ಥಾವರದ ಬೆಂಕಿ ನಂದಿಸುವುದರಲ್ಲಿ ಹೋರಾಡುತ್ತಾ ಅಥವಾ ಸ್ಥಾವರದ ಬಳಿಯೇ ಕಾರ್ಯನಿರ್ವಹಿಸಿ ಎಲುಬಿನ ಮಜ್ಜೆಗೆ ಹಾನಿಯುಂಟಾದವರನ್ನು ಬದುಕಿಸಲು ಅಮೆರಿಕದ ಖ್ಯಾತ ಮಜ್ಜೆ ಮರು ಅಳವಡಿಕೆ ತಜ್ಞ ಡಾ. ರಾಬರ್ಟ್ ಗೇಲ್ ಅವರನ್ನು ತತ್‌ಕ್ಷಣ ಮಾಸ್ಕೋಗೆ ಕರೆಯಿಸಿಕೊಂಡಿತು.

ಸಾವಿರಾರು ಮೈಲು ದೂರದಿಂದ ಮಾಸ್ಕೋದ ಕಂದು ಇಟ್ಟಿಗೆ ಬಣ್ಣದ ಆಸ್ಪತ್ರೆ ಆವರಣ ಸೇರಿದ ಡಾ. ಗೇಲ್‌ರ ಮೊದಲ ಕೆಲಸವೆಂದರೆ 'ಬರ್ಬರ'ವೆಂದು ಹೇಳಬಹುದಾದ "ಆರಿಸಿ ಚಿಕಿತ್ಸೆ ನೀಡುವಿಕೆ." ಇಂಗ್ಲಿಷ್‌ನಲ್ಲಿ ಇದಕ್ಕೆ ಟ್ರಯೇಜ್ ಎನ್ನುತ್ತಾರೆ. ಮೊದಲ ಮಹಾಯುದ್ಧದ ಸಮಯದಲ್ಲಿ ಅಸಂಖ್ಯಾತ ಗಾಯಗಳಿಗೀಡಾದ ಎಲ್ಲ ಸೈನಿಕರ ಸೇವೆಗೈಯಲಾಗದ ವೈದ್ಯರು ಅವರನ್ನು ಮೂರು ಗುಂಪುಗಳಾಗಿ ವಿಂಗಡಿಸುತ್ತಿದ್ದರು:– 1) ಶುಶ್ರೂಷೆ ಗೈದರೂ ಸಾವಿನಿಂದ ತಪ್ಪಿಸಿಕೊಳ್ಳಲಾಗದವರು. 2) ಬದುಕುಳಿಯಲು ಕೂಡಲೇ ಶುಶ್ರೂಷೆ ಅಗತ್ಯವುಳ್ಳವರು. 3) ಶುಶ್ರೂಷೆ ನೀಡದೆ ಇದ್ದರೂ ಚೇತರಿಸಿಕೊಳ್ಳುವವರು. ಸಹಾಯ ಹಸ್ತ ನಡುವಿನ ಗುಂಪಿನವರಿಗೆ ಮಾತ್ರ. ಈ ವಿಧಾನದಿಂದ ತೀರ ವಿಕಿರಣ ಹಾನಿಗೊಳಗಾದ 35 ಜನರಲ್ಲಿ ಗೇಲ್ 19ಮಂದಿಯನ್ನಾರಿಸಿಕೊಂಡರು. ಜೀವನ್ಮರಣಗಳ ನಡುವೆ ತೂಗುಯ್ಯಾಲೆಯಾಡುತ್ತಿದ್ದ ಅವರಿಗೆ 'ಜೀವ'ವೆಂಬ ಬೆಳಕು ನೀಡಲು ಗೇಲ್ ಸಿದ್ಧರಾದರು. ಅನಾಹುತದ ಸ್ಥಳದಲ್ಲಿ ಕಾರ್ಯನಿರ್ವಹಿಸಿದ ಈ 35 ಜನರಲ್ಲಿ ಅಗ್ನಿಶಾಮಕ ದಳದವರು, ಸ್ಥಾವರ ವಿಜ್ಞಾನಿಗಳು ಮತ್ತು ಡಾಕ್ಟರ್‌ಗಳೂ ಸೇರಿದ್ದರು.

ಚೆರ್ನೋಬೈಲ್ ದುರಂತದಲ್ಲಿ ಉಳಿದುಕೊಂಡವ್ಯಕ್ತಿ: ವಿಕಿರಣದಿಂದ ಬೋಳಾದ ತಲೆ

ಚೆರ್ನೋಬೈಲ್ ದುರಂತದಲ್ಲಿ ಸಾವಿನ ದವಡೆಗೆ ಸಿಲುಕಿದವರನ್ನು ಬದುಕಿಸಲು ಅಮೆರಿಕಾದಿಂದ ಧಾವಿಸಿದ ಡಾ। ಗೇಲ್‌ರ ಮನಮಿಡಿಯುವ ಅನುಭವ ಕಥನ.

ಹೆಚ್ಚಿನವರ ಸ್ಥಿತಿ ಗಂಭೀರವಾಗಿತ್ತು. ಮೈಯೆಲ್ಲ ಸುಟ್ಟು, ಬೊಕ್ಕತಲೆಯವರಾಗಿ ಹಲವಾರು ರೋಗಗಳಿಂದ ಬಳಲುತ್ತಿದ್ದರು. ವಿಕಿರಣ ವ್ಯಾಧಿಯಿಂದ ಕೆಲವರು ವಾಂತಿ ಮಾಡಿಕೊಳ್ಳುತ್ತಿದ್ದರೆ ಉಳಿದವರು ಒಳಾಂಗಗಳಲ್ಲಿ ರಕ್ತ ಸೋರುವಿಕೆಯ ಚಿಹ್ನೆ ತೋರುತ್ತಿದ್ದರು. ಹೆಚ್ಚಿನವರು ಅಗಾಧ ವಿಕಿರಣಕ್ಕೆ ಒಳಗಾಗಿ, ಅವರು ಪಡೆದ ವಿಕಿರಣ ಪ್ರಮಾಣವನ್ನೇ ಅಳೆಯುವುದು ಅಸಾಧ್ಯವಾಗಿತ್ತು. ಉಸಿರಾಡುವಾಗ ವಿಕಿರಣ ಸೂಸುವ ವಸ್ತುಗಳನ್ನು ಒಳಗೆ ಎಳೆದುಕೊಂಡಿದ್ದರಿಂದ ಅವರೇ ಒಂದು ವಿಕಿರಣದ ಆಗರವಾಗಿ ಬಿಟ್ಟಿದ್ದರು. ಶಸ್ತ್ರಚಿಕಿತ್ಸೆಗೈಯ್ಯ ಬೇಕಾದ ಡಾ।ಗೇಲ್ ಮಾತ್ರವಲ್ಲ ತಂಡದವರು ಈ ವಿಕಿರಣ ತಾಕದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕಿತ್ತು. ಅಣುಸ್ಥಾವರದಲ್ಲಿ ಕಾರ್ಯನಿರ್ವಹಿಸುವವರ ರಕ್ಷಣಾ ಉಡುಪು ಮತ್ತು ಎಚ್ಚರಿಕೆಯ ಬ್ಯಾಡ್ಜ್‌ಗಳನ್ನು ಧರಿಸಿಯೇ ರೋಗಿಗಳ ಬಳಿ ಸಾಗಬೇಕಿತ್ತು. ಡಾ। ಗೇಲ್ ಅವರ ಹೇಳಿಕೆಯಂತೆ "ನಾವು ಪರಿಶೀಲನೆಗೆಂದು ತೆಗೆದ ಕೆಲವು ಜೀವಕೋಶಗಳು ಸಹ ವಿಕಿರಣ ಸೂಸುತ್ತಿದ್ದವು. ರಕ್ತ, ಮೂತ್ರ, ಮಲದ ಮಾದರಿಗಳೆಲ್ಲೂ ವಿಕಿರಣ ಹೊಮ್ಮುತ್ತಿತ್ತು. ಈ ಬಗೆಯ ಪರಿಸ್ಥಿತಿ ನಮಗೆ ತೀರ ಹೊಸತು. ನಾವೆಲ್ಲ ಅತ್ಯಂತ ಜಾಗರೂಕರಾಗಿ ಕಾರ್ಯನಿರ್ವಹಿಸಬೇಕಿತ್ತು."

ಎಲುಬಿನ ಮಜ್ಜೆಯ ಮರು ಅಳವಡಿಕೆ ನಾಜೂಕಾದ ಅಪಾಯಕಾರೀ ಶಸ್ತ್ರ ಚಿಕಿತ್ಸೆಯಾಗಿದ್ದು 1970 ರಿಂದೀಚೆ ಅದು ಸಾಮಾನ್ಯವಾಗಿ ಬಳಕೆಯಲ್ಲಿದೆ. ಎಲುಬಿನ ಮಜ್ಜೆ ಸರಿಯಾಗಿ ಕಾರ್ಯನಿರ್ವಹಿಸದೆ ಯಾರೂ ಬದುಕಲಾರರು. ಸತ್ತ ಬಿಲಿಯನ್ ರಕ್ತ ಕಣಗಳನ್ನು

ಆರಾಧ್ಯಮೂರ್ತಿ

ಅಂತರ್‌ರಾಷ್ಟ್ರೀಯ ಎಲುಬಿನ ಮಜ್ಜೆ ಅಳವಡಿಕೆ ತಂತ್ರಜ್ಞಾನದಲ್ಲಿ ಕೀರ್ತಿ ಶಿಖರವೇರಿರುವ ಡಾ। ರಾಬರ್ಟ್ ಗೇಲ್ (ವಯಸ್ಸು 40) ಇಂದು ರಶಿಯನ್ನರ ಆರಾಧ್ಯಮೂರ್ತಿ. ಅಲ್ಲಿನ ಪ್ರಮುಖ ದಿನಪತ್ರಿಕೆ ಪ್ರಾವ್ಡ ಅವರಬಗ್ಗೆ ಪ್ರಕಟಿಸಿದ ಕವನ ಇದು.

"ದೇವರು ಮರಳಿ ಬಂದಿದ್ದಾನೆ...ಡಾ॥ ಗೇಲ್ ಹಿರೋಶಿಮಾ ವರ್ಷದಲ್ಲಿ ಜನಿಸಿದವನು"

ಲೆನಿನ್ ಮತ್ತು ನೊಬೆಲ್ ಶಾಂತಿ ಬಹುಮಾನಗಳೆರಡೂ ತಮಗೆ ಈ ಸಲ ಲಭಿಸಬಹುದೆಂದು ಡಾ। ಗೇಲ್ ಒಪ್ಪಿಕೊಳ್ಳುತ್ತಾರೆ. ಆದರೆ "ವೈದ್ಯಕೀಯ ವಿಜ್ಞಾನದಲ್ಲಿ ನೊಬೆಲ್ ಪಡೆಯಬೇಕೆಂಬುದು ನನ್ನ ಉತ್ಕಟ ಬಯಕೆ" ಎಂದು ಡಾ। ಗೇಲ್ ಹೇಳಿದ್ದಾರೆ.

ಮರು ಉತ್ಪಾದಿಸುವ ಮಜ್ಜೆಗೆ ತೀವ್ರ ಹಾನಿಯುಂಟಾ ದರೆ ಅದು ಅಗತ್ಯವಿರುವಷ್ಟು ರಕ್ತ ಕಣಗಳನ್ನು ಉತ್ಪಾದಿಸದು. ಪುಣ್ಯವಶಾತ್ ಮಜ್ಜೆಯನ್ನು ಮರು ಉತ್ಪಾದಿಸಬಹುದು. ವಿಕಿರಣದಿಂದ ಹಾನಿಯುಂಟಾಗಿದ್ದರೂ ಅದು ಚೇತರಿಸಿಕೊಳ್ಳಬಹುದು. 300 ರೆಮ್‌ಗಿಂತಲೂ ಹೆಚ್ಚು ವಿಕಿರಣ ಪಡೆದವರ ಏಕೈಕ ಆಶಾಕಿರಣ ಮಜ್ಜೆಯ ಮರು ಅಳವಡಿಕೆ. ಈ ಅಳವಡಿಕೆಯಲ್ಲಿ ಯಾವುದೇ ಶಸ್ತ್ರಕ್ರಿಯೆ ಯಿಲ್ಲ. ದಾನಿಗಳ ಅಸ್ಥಿಕುಹರದೊಳಗೆ ಸಿರಿಂಜ್ ಸೇರಿಸಿ ತೆಗೆದ ಮಜ್ಜೆಯಲ್ಲಿ ಕೊಬ್ಬು ಮತ್ತು ಎಲುಬಿನ ತುಣುಕುಗಳನ್ನು ತೆಗೆದು ನಂತರ ಸೋಡಿಯಮ್ ಸತ್ವವಾದ ಹೆಪ್ಪಿನ್ ಎಂಬ ಪದಾರ್ಥದಿಂದ ಪರಿಶುದ್ಧಗೊಳಿಸಲಾಗುವುದು. ರೋಗಿಯ ದೇಹ ಈ ಮಜ್ಜೆ ತಿರಸ್ಕರಿಸುವುದನ್ನು ತಡೆಗಟ್ಟಲು ಮಜ್ಜೆ ಪರಿಶುದ್ಧವಾಗಿರುವುದು ಅತ್ಯಗತ್ಯ. ನರಗಳ ಮೂಲಕ ರೋಗಿಯ ರಕ್ತದೊಳಕ್ಕೆ ಸಾಗಿಸಲ್ಪಟ್ಟ ಈ ಮಜ್ಜೆ ತನ್ನ ಸ್ಥಾನವನ್ನು ಸೇರಿಕೊಳ್ಳುತ್ತದೆ.

ಮಜ್ಜೆ ಪಡೆಯುವಾಗ ದಾನಿಯ ಮತ್ತು ರೋಗಿಯ ರಕ್ತದ ಮಾದರಿಯ ಹೊಂದಾಣಿಕೆ ಅತಿ ಅಗತ್ಯ. ಇಲ್ಲದಿದ್ದಲ್ಲಿ ದೇಹ ಮಜ್ಜೆಯನ್ನು ತಿರಸ್ಕರಿಸಬಲ್ಲದು. ಅಥವಾ ಮಜ್ಜೆಯೇ ಪಡೆದವನನ್ನು ತಿರಸ್ಕರಿಸಬಹುದು. ರಕ್ತ ಸಂಬಂಧಿಗಳು ನಿಜಕ್ಕೂ ಒಳ್ಳೆಯ ದಾನಿಗಳಾಗಬಲ್ಲರು.

ಹಾಗಾಗಿ ರೋಗಿಗಳ ಸಂಬಂಧಿಗಳನ್ನು ರಷ್ಯಾದ ಎಲ್ಲೆಡೆಯಿಂದ ವಿಮಾನದಲ್ಲಿ ಮಾಸ್ಕೋಗೆ ಕರೆತರಲಾಗಿತ್ತು. ಆರು ರೋಗಿಗಳು ಎಷ್ಟು ವಿಕಿರಣಕ್ಕೊಳಗಾಗಿದ್ದರೆಂದರೆ ಸಾಮ್ಯ ಪರೀಕ್ಷಿಸಲು ಅವರಲ್ಲಿ ರಕ್ತವೇ ಇರಲಿಲ್ಲ. ಮರೀಕ್ಷೆಗೆ ರಕ್ತ ಉತ್ಪತ್ತಿ ಮಾಡಲು ಅವರ ದೇಹದೊಳಗೆ ಗರ್ಭಪಾತದಲ್ಲಿ ಜನಿಸಿದ ನಾಲ್ಕು ತಿಂಗಳ ಭ್ರೂಣಗಳ ಯಕೃತ್‌ಗಳನ್ನು ಒಳ ಸೇರಿಸಿ ರಕ್ತ ಉತ್ಪಾದಿಸಬೇಕಾಯ್ತು.

ಶಸ್ತ್ರ ಚಿಕಿತ್ಸಾ ತಂಡ ಪ್ರಪಂಚದೆಲ್ಲೆಡೆಯಿಂದ ಅಗತ್ಯವಾದ ಔಷಧಿ-ಉಪಕರಣೆಗಳನ್ನು ತರಿಸಿಕೊಂಡಿತು. ಡಾ। ಗೇಲ್ ನಡೆದಂತೆ ಶಸ್ತ್ರಚಿಕಿತ್ಸೆಯಲ್ಲಿ ಸುಮಾರು ಹದಿನೈದು ರಾಷ್ಟ್ರಗಳ ಸಹಾಯಹಸ್ತವಿತ್ತು. ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾಕ್ಟರ್‌ಗಳು ಎರಡು ವಾರಗಳಲ್ಲಿ 19 ಶಸ್ತ್ರಚಿಕಿತ್ಸೆಗೈದರು. ಆದರೂ 19 ಜನ ಮರು ಅಳವಡಿಕೆ ಪಡೆದವರಲ್ಲಿ 11 ಮಂದಿ ಅಸು ನೀಗಿದರು. ಅಳವಡಿಕೆಗಳು ತೀರ ಪರಿಣಾಮಕಾರಿಯಲ್ಲವೆಂದು ರಶ್ಯನ್ ವೈದ್ಯರೂ ಒಪ್ಪಿಕೊಂಡರು. ಇದರಿಂದ ತಿಳಿಕೊಳ್ಳಬೇಕಾದ ನೀತಿ ಬಹಳ. ಹಲವಾರು ದೇಶಗಳ ಸಹಕಾರದಿಂದಷ್ಟೇ ಕೆಲವೇ ಮಂದಿ ಹಾನಿಗೊಳಗಾದವರನ್ನು ಚಿಕಿತ್ಸೆಗೊಳಪಡಿಸಲು ಸಾಧ್ಯವಾಯಿತು. ಅಂದರೆ ಯಾವೊಂದು ದೇಶವೂ ಅಣುದುರಂತಗಳನ್ನೆದುರಿಸುವ ಸಾಮರ್ಥ್ಯ ಪಡೆದಿಲ್ಲವೆಂದು ಮನದಟ್ಟಾಯಿತು.

ರಷ್ಯಾದಿಂದ ಹಿಂತೆರಳುವ ಮುನ್ನ ಡಾ। ಗೇಲ್ ಅವರಿಗಿದ್ದ ಮುಖ್ಯ ಆಶಯ-ಚೆರ್ನೊಬೈಲ್ ಅಣುಸ್ಥಾವರ ವೀಕ್ಷಣೆ. ಅವರೊಂದಿಗಿದ್ದ ಕೆಮರಾ ತೆಗೆದಿಂತ ಹೆಲಿಕಾಪ್ಟರ್‌ನಲ್ಲಿ ಅವರನ್ನಲ್ಲಿಗೆ ಕರೆದೊಯ್ಯಲಾಯ್ತು. ಅವಶೇಷಗಳ ನಡುವಿದ್ದ ಇನ್ನೂ ಹೊಗೆಸೂಸುತ್ತಿದ್ದ ಸ್ಥಾವರ ಮುಚ್ಚುವ ಪ್ರಯತ್ನ ಹಲವಾರು ಹೆಲಿಕಾಪ್ಟರ್‌ಗಳಿಂದ ನಡೆದಿತ್ತು. ಹೆಲಿಕಾಪ್ಟರ್‌ಗಳಲ್ಲಿ ಬೋರಾನ್ ಮತ್ತು ಮರಳಿನ ಮಿಶ್ರಣವನ್ನೊಯ್ದು ಸ್ಥಾವರದ ಮಧ್ಯಭಾಗಕ್ಕೆ ಎಸೆಯಲಾಗುತ್ತಿತ್ತು. ಈ ಬೃಹತ್ ಔದ್ಯಮಿಕ ಸಂಕೀರ್ಣದಲ್ಲಿ ಮಾನ ಪ್ರರ ಸುಳಿವೇ ಇರಲಿಲ್ಲ.

40,000 ಕ್ಕೂ ಮಿಗಿಲಾದ ಜನಸಂಖ್ಯೆ ಹೊಂದಿದ್ದ ಸಮೀಪದ ಪ್ರಿಪಾಯತ್ ನಗರದಲ್ಲೂ ಅದೇ ಪರಿಸ್ಥಿತಿ. ಮರ್ಬೀನಿನಲ್ಲಿ ನೋಡಿದರೂ ಜನವಿಲ್ಲ. ಅತೀ ಅವಸರದಲ್ಲಿ ಜನ ನಗರ ಬಿಟ್ಟೋಡಿರುವುದು ಸ್ಪಷ್ಟವಾಗಿತ್ತು. ಹಲವು ಮನೆಯ ಕಿಟಕಿಗಳು ತೆರೆದಿದ್ದವು. ಕಾಲ್ಚೆಂಡೊಂದು ಅನಾಥವಾಗಿ ಅಲ್ಲೇ ಮೈದಾನಿನಲ್ಲಿ ಬಿದ್ದುಕೊಂಡಿತ್ತು. ಯಾವುದೇ ಚಟುವಟಿಕೆಯಿಲ್ಲದೆ ಮರುಭೂಮಿಯಂತೆ ಗೋಚರಿಸುತ್ತಿದ್ದ ಸ್ಥಳ.

ಎಲ್ಲವನ್ನೂ ನೋಡಿದ ಬಳಿಕ ಡಾ। ಗೇಲ್ ಹೇಳುತ್ತಾರೆ: "ಅಣುವೊಂದು ಒಳಿತಿಗೆ ಅಥವಾ ಕೆಡುಕಿಗೆ ಏನು ಮಾಡಬಹುದೆಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ. ನಾನು ಯೋಚಿಸಿದೆ. ಇದೊಂದು ಒಳ್ಳೆಯ ನೀತಿಪಾಠ. ಆ ದೃಶ್ಯವನ್ನು ಮಂತೆಯೇ ಮನದಲ್ಲಿ ಅಚ್ಚೊತ್ತಲು ನಾನು ನಿರ್ಧರಿಸಿದೆ. ವಿಶಾಲವಾದ ಸೂಪರ್ ಮಾರ್ಕೆಟ್‌ಗಳು, ಶಾಲೆಗಳು, ಸ್ಟೇಡಿಯಂಗಳು- ಎಲ್ಲವೂ ಜನರಹಿತ.



ತ್ರೀಮೈಲ್ ಐಲ್ಯಾಂಡ್ ಅಣು ಸ್ಥಾವರ

ಈ ದೃಶ್ಯ ಓರೋಶಿಮಾ ನಾಗಸಾಕಿಗಳಂತೆ ಮನದಲ್ಲಿ ಉಳಿಯಬಲ್ಲುದು. ಈ ಸಂದೇಶವನ್ನು ಎಲ್ಲೆಡೆಗೆ ಕೊಂಡೊಯ್ಯಲು ನನ್ನ ಮನ ತವಕಿಸಿತು. ಮಾಸ್ಕೋದಲ್ಲಿ ರಶ್ಯಾ ಅಧ್ಯಕ್ಷ ಗೊರ್ಬಚೇವ್ ಅವರೊಂದಿಗ ಹೇಳಿದ ನನ್ನ ಮಾತೊಂದು ನೆನಪಿಸಿಕೊಂಡೆ. ದುರಂತದ ಪ್ರಮಾಣ ಮತ್ತು ಅಗತ್ಯವಾದ ಅಪಾರ ವೈದ್ಯಕೀಯ ಸಂಪತ್ತು ಇದರತ್ತ ಗಮನಹರಿಸಿದರೆ ಇದಕ್ಕಿಂತ ಮಿಗಿಲಾದ ಸ್ಥಾವರ ದುರಂತವೆದುರಿಸಲು ಜಗತ್ತಿನಿಂದ ಅಸಾಧ್ಯವೆನ್ನುವುದು ಎಲ್ಲರಿಗೂ ಅರಿವಾಗಬೇಕಾಗಿದೆ."

"ನಾನು ಹೊರಡುವ ಹಿಂದಿನ ದಿನವಷ್ಟೇ ಟಿ.ವಿ. ಯಲ್ಲಿ ಆತನ ಚಿತ್ರ ಮೂಡಿಬಂತು. ನಾನು ಚಿಕಿತ್ಸೆ ನೀಡಿದವನ ಚಿತ್ರವದು. ದುರಂತದ ಮುನ್ನ ನೆಮ್ಮದಿಯ ಸಾಮಾನ್ಯ ಮನುಷ್ಯನಾಗಿದ್ದವ ಇಂದು ನಾಯಕನ ಪಟ್ಟ ಅಲಂಕರಿಸಿದ್ದ. ಬಾಲ್ಯದಿಂದ ಆತ ಸಾವನ್ನಪ್ಪುವವರೆಗಿನ ಹಲವಾರು ಸನ್ನಿವೇಶಗಳು ಟಿ.ವಿ ಯಲ್ಲಿ ಮೂಡಿಬರುತ್ತಿತ್ತು. ಕಣ್ಣಲ್ಲಿ ನೀರಿಳಿಯುತ್ತಿದ್ದಂತೆ ಹಲವಾರು ಸೋಲುಗಳು ಒಂದೊಂದಾಗಿ ಉರುಳಿ ಹೋಗುವುದನ್ನು ನಾನು ಕಂಡೆ."

(ಆಧಾರ)

ಅಮೃತರ ಹೊಸ ಕೃತಿ

ಕೆಂಪು ನೆನಪು: ಸಣ್ಣ ಕತೆಗಳು
ಲೇಖಕ: ಅಮೃತ ಸೋಮೇಶ್ವರ
ಪ್ರಕೃತಿ ಪ್ರಕಾಶನ ಕೋಟೇಶ್ವರ

ಪುಸ್ತಕ ವಿಮರ್ಶೆ

ಕನ್ನಡದಲ್ಲಿ ಸಣ್ಣ ಕತೆಗಳು ಈಗ ಹೆಚ್ಚಾಗಿ ಬರುತ್ತಿಲ್ಲ. ದಲಿತ-ಬಂಡಾಯದ ಪ್ರವಾಹದಲ್ಲಿ ಅನ್ಯಾಯವನ್ನು ಪ್ರತಿಭಟಿಸುವ ಹಲವು ಕೃತಿಗಳು ಬಂದದ್ದುಂಟು. ಆನಂತರ ಅವು ಒಂದೇ ಮಾದರಿಗಳಾದುವು. ಈ ಸಂದರ್ಭದಲ್ಲಿ ಯಾವ ಆವೇಶವೂ ಇಲ್ಲದ, ಆದರೆ ತಣ್ಣಗೆ ಕಾಡುವ 'ಕೆಂಪು ನೆನಪು' ಸಂಕಲನವನ್ನು ಅಮೃತರು ಪ್ರಕಟಿಸಿದ್ದಾರೆ. ತಮ್ಮ ಮೊದಲ ಕಥಾಸಂಕಲನವಾದ ಎಲೆಗಳ'ಗೂ ಈ ಸಂಕಲನಕ್ಕೂ ಮಧ್ಯೆ ಅಪಾರವಾದ ಅಂತರವನ್ನು ಲೇಖಕರು ಕಾದುಕೊಂಡಿದ್ದಾರೆ. ಈ ಅಂತರ ಅವರ ಸೃಜನಶೀಲತೆಯ ಮೇಲೆ ಅಷ್ಟೇ ಪರಿಣಾಮ ಬೀರಿದೆಯೋ ಎಂದು ಸುಲಭವಾಗಿ ಹೇಳಲಾಗದು. ಬಹುಶಃ ಇಲ್ಲ. ಏಕೆಂದರೆ ಎಲೆಗಳಲ್ಲಿ ಕಂಡು ಬರುವ ಸುಮಧುರವಾದ ಮೃದುಮನಸೇ ಇಲ್ಲಿ ಕೆಲಸ ಮಾಡಿದೆ. ಆಯ್ದುಕೊಂಡ ವಸ್ತುವಿನಲ್ಲಿ ಬದಲಾವಣೆ ಯಾಗಿದೆ ನಿಜ. ನಿರೂಪಣೆಯಲ್ಲಿ ವ್ಯತ್ಯಾಸ ಇಲ್ಲ.

'ಕೆಂಪು ನೆನಪು'ವಿನಲ್ಲಿ 11 ಕತೆಗಳಿವೆ. ಪ್ರೇಮ, ಕಲೆ ಮತ್ತು ಜಾತಿಯಿಂದುಂಟಾಗುವ ಸಮಸ್ಯೆಗಳನ್ನು ಇಲ್ಲಿ ಪ್ರಧಾನವಾಗಿ ಎತ್ತಿಕೊಳ್ಳಲಾಗಿದೆ. 'ಕೆಂಪು ನೆನಪು' ಮತ್ತು 'ಗಂಗಾಂತರಂಗ' ಕತೆಗಳು ಅನೇಕ ಕಾರಣಗಳಿಂದ ಸಂಕಲನದ ಮುಖ್ಯ ಕತೆಗಳೆಂಬ ಮನ್ನಣೆಗೆ ಅರ್ಹವಾಗಿವೆ.

'ಕೆಂಪು ನೆನಪು' ಕತೆಯಲ್ಲಿ ರೋಸಲಿಂಡ್ ಮತ್ತು ಅಮರನಾಥ್ ಅವರ ಮಧ್ಯದ ಸಂಬಂಧದ ಸೂಕ್ಷ್ಮ ಅವಲೋಕನವಿದೆ. ಈ ಸಂಬಂಧವು 'ಕೆಂಪು ಗುಲಾಬಿ'ಯ ಹಾಗೆ ಇರುವುದರಿಂದ ಕತೆಯ ಆದಿಯಲ್ಲಿ ಬರುವ ಗುಲಾಬಿಯ ಉಲ್ಲೇಖ ಇಡೀ ಕತೆಗೆ ಒಂದು ಸುಂದರವಾದ ಚೌಕಟ್ಟನ್ನು ಒದಗಿಸುತ್ತದೆ.ಈ ಚೌಕಟ್ಟು ಸರಳವಾಗಿರದೆ, ಸಾಂಕೇತಿಕವಾಗಿರುವುದರಿಂದ ಕತೆಗೆ ತಾಂತ್ರಿಕ ಯಶಸ್ಸು ಲಭಿಸಿದೆ. ಅಮರನಾಥ್ ಅವನು ರೋಸಾ ಅವಳ ಮೇಲಿಟ್ಟ ಕಾಮಪ್ರಧಾನ ದೃಷ್ಟಿಕೋನವೂ ರೋಸಾ ಅವಳು ಅಮರನಾಥನ ಮೇಲಿಟ್ಟ ನಿರ್ವ್ಯಾಜ ಪ್ರೇಮವೂ ಮುಖಾಮುಖಿಯಾಗುತ್ತದೆ. ಈ ಎರಡೂ ದೃಷ್ಟಿಕೋನಗಳು ಬೇರೆ ಬೇರೆ ಘಟನೆಯ ಮೂಲಕ ಕತೆಯಲ್ಲಿ ಅಭಿವ್ಯಕ್ತವಾಗುತ್ತಾ ಹೋಗುತ್ತದೆ. ಕೊನೆಯಲ್ಲಿ ಅಮರನಾಥನ ಮನಸ್ಸು ಪಾಪಿ. ರೋಸಾಳನ್ನು ಅರ್ಥಮಾಡಿಕೊಳ್ಳುವಷ್ಟು ಬೆಳೆಯುತ್ತದೆ. ಆದರೆ ಕತೆಯ ಕೊನೆಯಲ್ಲಿ ರೋಸಾಳು ಸಾಯುವುದರೊಂದಿಗೆ ಕತೆಗೆ ಅನಿರೀಕ್ಷಿತ ದುರಂತ ಮುಕ್ತಾಯವಾಗುತ್ತದೆ. ಆ ಮೂಲಕ ರೋಸಾಳ ಪ್ರೇಮವನ್ನು ಇನ್ನಷ್ಟು ಉದಾತ್ತಗೊಳಿಸಲಾಗಿದೆ. ಗಂಡು-ಹೆಣ್ಣಿನ ಮಧ್ಯದ ಸಂಬಂಧದಲ್ಲಿನ ಸೂಕ್ಷ್ಮತೆಗಳನ್ನು ದಾಖಲಿಸುವಲ್ಲಿ, ಹೆಣ್ಣಿಗಿಂತ ಗಂಡು ಹೆಚ್ಚು ಸ್ವಾರ್ಥಿಯಾಗಿರುವುದನ್ನು ಕತೆಯ ಮೂಲಕ ಹೇಳುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. 'ಗಂಗಾಂತರಂಗ' ಕತೆಯಲ್ಲಿ ಪುರಾಣ ಪ್ರಪಂಚದ ಗಂಗೆಗೆ ಆಧುನಿಕ ಅರ್ಥವನ್ನು ನೀಡುವ ಪ್ರಯತ್ನ ಮಾಡಲಾಗಿದೆ. ಹಸ್ತಿನಾಪುರದ ಪ್ರತೀಪನ ಹಿರಿಯ ಮಗನಾದ ದೇವಾಪಿಯನ್ನು ಪ್ರೀತಿಸಿದ ಆಕೆ ಸತ್ಯವತಿಯ ಅಕ್ಕನೂ ಆಗಿದ್ದಾಳೆ. ದೇವಾಪಿಯಿಂದ ಪ್ರೇಮವಂಚಿತೆಯಾದ ಆಕೆ ಶಂತನುವನ್ನು ಮದುವೆಯಾಗ ಬೇಕಾಗುತ್ತದೆ. ಆದರೆ ಪ್ರೇಮವಂಚಿತೆಯಾದ ಆಕೆಯ ಹೃದಯ ಅಂಳುವುದೇ ಇಲ್ಲಸೂತ್ರದ ಗೊಂಬೆಯಂತೆ, ಅಸ್ವತಂತ್ರಳೆಯಂತೆ ಅರೆ ಎಚ್ಚರದಲ್ಲಿರುವಂತೆ ಆಕೆ (ಪು 119) ನಡೆದುಕೊಳ್ಳುತ್ತಾಳೆ. ಈ ಮಾನಸಿಕ ಒತ್ತಡದಲ್ಲಿಯೇ ಆಕೆ ಮುಂದೆ ಹುಟ್ಟಿದ 7 ಮಕ್ಕಳನ್ನೂ ನೀರಿಗೆ ಚೆಲ್ಲುತ್ತಾಳೆ. ಇದು ಆಕೆಗೇ ಅರಿವಿಲ್ಲದಂತೆ, ಆಕೆಯಿಂದಲೇ ನಡೆದ ಕೆಲಸ. ಲೇಖಕರು ಇಲ್ಲಿ ಗಂಗೆ ಮಕ್ಕಳನ್ನು ನೀರಿಗೆಸೆದ ಕ್ರಿಯೆಗೆ ಮಾನಸಿಕ ಕಾರಣಗಳನ್ನು ನೀಡುತ್ತಾರೆ. ಆ ಮೂಲಕ ಗಂಗೆಯನ್ನು ರಕ್ಷಿಸಿದ್ದಾರೆ. ಕೊನೆಗೊಮ್ಮೆ ಶಂತನುವು ಆಕೆಯನ್ನು ಅರೆ ಸ್ವಪ್ನಾವಸ್ಥೆಯಿಂದ ಎಚ್ಚರಿಸುವಾಗ ಆಕೆಗೂ ಪರಿಸ್ಥಿತಿಯ ತೀವ್ರ ಮೂಡಿತು. ಆಕೆಯ ಮಾನಸಿಕ ಒತ್ತಡವನ್ನು ಅರಿಯಲಾರದ ಶಂತನು ಆಕೆಯನ್ನು ಭಂಗಿಸಿದಾಗ, ಆಕೆ ನದಿಯಲ್ಲಿ ಐಕ್ಯವಾಗುತ್ತಾಳೆ. ಹೀಗೆ ಕತೆಯು ಪುರಾಣ ಪ್ರಪಂಚಕ್ಕಿಂತ ಬೇರೆಯದೇ ಆದ ರೀತಿಯಲ್ಲಿ ಬೆಳೆಯುತ್ತದೆ. ಇಡೀ ಕತೆಯು ಗಂಗೆಯ ಮನಸ್ಸಿನ ಆಂತರಿಕ ತಲ್ಲಣವನ್ನು ಸೊಗಸಾಗಿ ಅನಾವರಣ ಮಾಡುತ್ತದೆ. ಪುರಾಣ ಕತೆಗಳನ್ನು ತನ್ನ ಉದ್ದೇಶಕ್ಕಾಗಿ ಬಳಸಲಾಯಿತೆಂದು, ಅವುಗಳ ಮೂಲಕ ಹೊಸ ಅರ್ಥವನ್ನು ಪ್ರಕಟಪಡಿಸುವ ಲೇಖಕರ ಧೋರಣೆ ಗಮನಾರ್ಹವಾದುದು. 'ಕೆಂಪು ಗುಲಾಬಿ'ಯಲ್ಲಿ 'ರೋಸಾ'ಳನ್ನು ಉದಾತ್ತಗೊಳಿಸಿದ ಹಾಗೆ ಇಲ್ಲಿ 'ಗಂಗೆ'ಯನ್ನು ಉದಾತ್ತಗೊಳಿಸಲಾಗಿದೆ.

'ಕಲಾವಿದನ ಉತ್ತರಾಯಣ'ವು ಆತ್ಮಚರಿತ್ರೆಯ ಮಾದರಿಯಲ್ಲಿರುವ ಇನ್ನೊಂದು ಉತ್ತಮ ಕತೆ. ಯಕ್ಷಗಾನ ರಂಗ ಸ್ಥಳದಿಂದ ನಿವೃತ್ತನಾದ ಕಲಾವಿದನೊಬ್ಬ, ತನ್ನ ಬಣ್ಣದ ಬದುಕನ್ನು ನೆನೆಸಿಕೊಳ್ಳುತ್ತಾ ಹೋಗುತ್ತಾನೆ. ಬಣ್ಣದ ಬದುಕಿನ ಸೊಗಸಾದ ಸಂದರ್ಭಗಳು, ಪ್ರಣಯ ಪಟ್ಟಗಳು, ಜುಗಾರಾಟಗಳು, ಎಲ್ಲ ಅವನಿಗೆ ನೆನಪಾಗುತ್ತದೆ. ಹೀಗೆ ನೆನಪಾಗುವುದರ ಮೂಲಕ ಕಲಾವಿದನ ಬದುಕಿನ ವರ್ಣರಂಜಿತ ಇತಿಹಾಸವೂ ಅನಾವರಣಗೊಳ್ಳುತ್ತದೆ. ಇದರೊಂದಿಗೆ ಕಲೆಯಿಂದ ನಿವೃತ್ತಿ ಹೊಂದಿದಾಗಲೂ ಸ್ಥಿತಿಯೂ ಕತೆಯಲ್ಲಿ ಅನಾವರಣಗೊಳ್ಳುತ್ತದೆ. ಹೀಗೆ ಎರಡು ಸ್ಥಿತಿಗಳೂ ಅಕ್ಕ ಪಕ್ಕದಲ್ಲಿದ್ದಂತೆ ಇರುವುದರಿಂದಲೇ ಈ ಕತೆಗೆ ಒಂದು ವಿಧದ ಅನನ್ಯತೆ ಪ್ರಾಪ್ತವಾಗಿದೆ. ಕರಾವಳಿಯಲ್ಲಿ ಜನಪ್ರಿಯವಾಗಿರುವ ಯಕ್ಷಗಾನ ಕಲೆಯಲ್ಲಿ ತೊಡಗಿಸಿಕೊಂಡ ಕಲಾವಿದನೊಬ್ಬನ ಜೀವನ ಕಥನ ಇದೇ ಮೊದಲ ಬಾರಿಗೆ ಕತೆಯ ಮೂಲಕ ಪ್ರಕಟವಾಗಿದೆ ಈ ವಿಧದ ವಸ್ತು ಸಣ್ಣ ಕತೆಗಳಿಗೆ ಬಂದದ್ದು ಕಡಿಮೆ.

'ಮಾಟ' ಕತೆ ಮಾಸ್ತಿಯವರ ಕತೆಗಳ ಮಾದರಿಯಲ್ಲಿದೆ. ಭೂತ ಕಟ್ಟುವ 'ಶ್ಯಾಂಪ' ಊರಿನ ತೊಂದರೆಗಳನ್ನು ನಿವಾರಿಸಿದರೂ, ತನ್ನ ಸಮಸ್ಯೆಗಳನ್ನು ಬಿಡಿಸಿಕೊಳ್ಳಲಾಗದೆ ಒದ್ದಾಡಿ ಸತ್ತ ಕತೆ ಇದು. ಲೇಖಕರು ಕಲಾವಿದನ ಅಂತರಂಗವನ್ನು ಹೊಕ್ಕು ಅಲ್ಲಿನ ಪ್ರಪಂಚವನ್ನು ಹೊರಗೆ ಕಾಣಿಸಿದ್ದಾರೆ. ಮಾಟ-ಮಂತ್ರ-ಲೈಂಗಿಕತೆಯ ಮಧ್ಯೆ ಅತಂತ್ರವಾಗಿಹೋಗಿರುವ ಶ್ಯಾಂಪನಚಿತ್ರವು, ಮಾಸ್ತಿಯವರ ಕತೆಗಳಲ್ಲಿ ಕಾಣಸಿಗುವ ರಂಗಪ್ಪನನ್ನೋ ವೆಂಕಟಶಾಮಿಯನ್ನೋ ನೆನಪಿಗೆ ತರುವಷ್ಟು ಪ್ರೌಢವಾಗಿದೆ. ಕಲಾವಿದನ ಉತ್ತರಾಯಣ ಮತ್ತು ಮಾಟ ಕತೆಗಳು ಕಲಾವಿದರ ಅಂತರಂಗವನ್ನು ಅನಾವರಣ ಮಾಡುತ್ತವೆ ಎಂಬ ಕಾರಣಕ್ಕೆ ಮುಖ್ಯವಾಗುತ್ತವೆ.'ನೀಲಿ ಪೆನ್ನಿಂದಾಗಿ' ಒಂದು ಸಾಮಾನ್ಯ ಕತೆ. 'ಯತ್ರ ನಾರ್ಯಸ್ತು ಪೂಜ್ಯಂತೇ'-ಅಂತರ ಜಾತಿ ವಿವಾಹದ ಪರವಾಗಿದೆಯಾದರೂ ಅದರಿಂದುಂಟಾಗುವ ಹಾನಿಯನ್ನು, ಸಮಾಜದಲ್ಲಿ ಮಹಿಳೆಯ ಮೇಲಾಗುವ ಅನ್ಯಾಯವನ್ನು ಚಿತ್ರಿಸುತ್ತದೆ.ಈ ಕತೆಯ ಇನ್ನೊಂದು ವಿಶೇಷವೆಂದರೆ ಅದರ ತಂತ್ರಗಾರಿಕೆ. ಕತೆಯ ಅರ್ಧದ ಅನಂತರ ದಿನಚರಿಯ ಪುಟಗಳ ಮೂಲಕ ಕತೆಸಾಗುತ್ತದೆ. ಆ ಮೂಲಕ ಕತೆಗೆ ವಾಸ್ತವದ ವಾತಾವರಣವನ್ನು ಹೊದಿಸಲಾಗಿದೆ.

'ಗದ್ದುಗೆ ದೊರಕಿದರೆ' ಕತೆಗೆ ಎರಡು ಆಶಯವಿದೆ. ಒಂದೆಡೆಯಲ್ಲಿ ಅದು ಗದ್ದುಗೆಗೇರಿದ ಮನುಷ್ಯ-ತನ್ನ ಮನುಷ್ಯತ್ವವನ್ನು ಬಿಟ್ಟು, ಯಾಂತ್ರಿಕನಾಗುತ್ತಾ ಹೋಗುವುದನ್ನು ಚಿತ್ರಿಸುತ್ತದೆ. ಇನ್ನೊಂದೆಡೆಯಿಂದ ಅದನ್ನು ಪ್ರತಿಭಟಿಸಬೇಕಾದ ಅಗತ್ಯವನ್ನು ಹೇಳುತ್ತದೆ, ಮಾಸ್ತರರ ರಾಜೀನಾಮೆಯು ಅವರಿಗಿರುವ ವ್ಯವಸ್ಥಾವಿರೋಧಿ ಗುಣವನ್ನು ಸಶಕ್ತವಾಗಿ ಹೇಳುತ್ತದೆ. 'ಈಸಬೇಕು' ದಲಿತನೊಬ್ಬನ ಸ್ಥಿತಿಗೆ ಸುಂದರ ವ್ಯಾಖ್ಯಾನ. ದಲಿತನು ವಿದ್ಯಾವಂತನಾದರೂ, ಸಮಾಜದಲ್ಲಿ ಎದುರಿಸಬೇಕಾದ ಅಪಮಾನವೀಯ ಸ್ಥಿತಿಯ ಬಗ್ಗೆ ಈ ಕತೆ ಒಳ್ಳೆ ವಿವರಣೆ ನೀಡುತ್ತದೆ.

'ಋಣಾನುಬಂಧ' ಅತ್ಯಂತ ಸುಸಂಸ್ಕೃತ ಮನಸ್ಸೊಂದರ ಅಭಿವ್ಯಕ್ತಿ.ಸಮಾಜದಲ್ಲಿರುವ ಸಂಸಾರಿಯಾದ ಋಷಿಯೊಬ್ಬನ ಮನಸ್ಸಿನ ಉದಾತ್ತತೆ ಇಲ್ಲಿ ವ್ಯಕ್ತವಾಗಿದೆ. 'ಯೋಗಾಯೋಗ' ಮೂರು ಘಟನೆಗಳನ್ನು ತರ್ಕಬದ್ಧವಾಗಿ ಜೋಡಿಸಿದೆ. ತಾಂತ್ರಿಕತೆಯೇ ಈ ಕತೆಯ ಜೀವಾಳ. 'ಮಾನವತೆ ಗೆದ್ದಾಗ' ಬಹುಶಃ ತುಂಬ ಮಹತ್ವಾಕಾಂಕ್ಷೆಯಾದ ಕತೆ. ಹಿಂದೂ ಸ್ವಾಮಿಯೊಬ್ಬ ಮುಸ್ಲಿಂ ಧರ್ಮದ ಹುಡುಗಿಯನ್ನು ಬದುಕಿಸುವುದು, ಮುಸ್ಲಿಮನೊಬ್ಬ ಹಿಂದೂ ಸ್ವಾಮಿಯೊಬ್ಬನ ಮಠದ ಪೌಳಿಯನ್ನು ದುರಸ್ತಿ ಮಾಡುವುದು ಇಲ್ಲಿನ ವಸ್ತು. ಇದು ಸಾಂಪ್ರದಾಯಿಕ ಧರ್ಮದ ಚೌಕಟ್ಟನ್ನು ದಾಟಿ ಕೇವಲ ಮನುಷ್ಯತ್ವಕ್ಕಾಗಿ ಒಂದಾಗುವ ಹೃದಯಗಳ ಜೋಡಣೆ. ಕೋಮು ಭಾವದಿಂದ ನರಳುವ ಭಾರತಕ್ಕೆ ಇಂಥ ಸಂಬಂಧಗಳೇ ಮರೆತು ಹೋಗಿದೆ. ಈ ಕತೆಯ ಮೂಲಕ ಅಮೃತರು ಪ್ರಕಟಪಡಿಸುವ ಧೋರಣೆ ವಿಶಿಷ್ಟವಾದದ್ದು. ಪ್ರಗತಿಪರವಾದುದು, ಅತ್ಯಂತ ಮಾನವೀಯವಾದುದು.

ಅಮೃತರ ಕತೆಗಳು ಸರಳವಾಗಿಯೇ ಮಹತ್ತ್ವದ ವಿಚಾರಗಳನ್ನು ಹೇಳುವ ಉದ್ದೇಶ ಹೊಂದಿವೆ. ಅವರದು ಘಟನಾ ಪ್ರಧಾನ ನಿರೂಪಣೆ. ಘಟನೆಗಳ ಮೂಲಕ ಕತೆಗೆ ಅರ್ಥಕೊಡುವ ಯತ್ನ ಅವರದು. ಮಧ್ಯೆ ಒಮ್ಮೊಮ್ಮೆ ಘಟನೆಗೆ ನಿರೂಪಕನ ಮೂಲಕ ವ್ಯಾಖ್ಯಾನ ಮಾಡಿಸುವಾಗ, ಕತೆ ಸರಳವಾಗಿ ಬಿಡುವ ಸಂದರ್ಭವೂ ಇದೆ.

ಅಮೃತರ ಕತೆಗಳ ಪ್ರಧಾನ ದೋಷ, ಘಟನೆಗಳಿಗೆ ನಿರೂಪಕ ಮಾಡುವ ವ್ಯಾಖ್ಯಾನದಲ್ಲಿದೆ. ಏನಿದ್ದರೂ ಸಣ್ಣಕತೆಗ ಳ ಲೋಕಕ್ಕೆ ಅಮೃತರು ಕೆಲವು ಹೊಸ ವಸ್ತುಗಳನ್ನು ನೀಡಿದ್ದಾರೆ. ಸರಳತೆಯಿಂದಲೇ ಅವರ ಕತೆಗಳು ಗೆಲ್ಲುತ್ತವೆ.

—ಪುರುಷೋತ್ತಮ ಬಿಳಿಮಲೆ

'ಮಾಧುರಿ' ಸೆನ್ಸಾರ್‌ಗೆ ಸಿದ್ಧ

ಶ್ರೀ ಜಯದುರ್ಗ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕೆ.ವಿ.ಜಯರಾಮ್ ನಿರ್ದೇಶಿಸುತ್ತಿರುವ "ಮಾಧುರಿ" ಪ್ರಣಯ ಪ್ರಧಾನ ಸಾಹಸಮಯ ವರ್ಣಚಿತ್ರದ ರೀರೆಕಾರ್ಡಿಂಗ್ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನಡೆದು ಮುಕ್ತಾಯವಾಗಿದೆ ಸಂಗೀತ ನಿರ್ದೇಶಕ ಸಂಗೀತರಾಜ ಹಿನ್ನೆಲೆ ಸಂಗೀತದಲ್ಲಿಯೂ ಒಂದು ಹೊಸ ಪ್ರಯೋಗವನ್ನು ಮಾಡಿದ್ದಾರೆ. ಚಿತ್ರದ ಹಾಡುಗಳ ರಾಗಸಂಯೋಜನೆಯಲ್ಲಿ ವಯೊಲಿನ್ ವಾದ್ಯವನ್ನೇ ಬಳಸದ ಅವರು ರೀರೆಕಾರ್ಡಿಂಗ್‌ನಲ್ಲಿ ಹೆಚ್ಚಾಗಿ ವಯೊಲಿನ್ ವಾದ್ಯಗಳನ್ನೇ ಉಪಯೋಗಿಸಿ ವಿಭಿನ್ನವಾದ ಪರಿಣಾಮವನ್ನು ಉಂಟುಮಾಡಿದ್ದಾರೆ

ಗೀತಾ, ವಿನೋದ ಆಳ್ವ ಪ್ರಥಮ ಬಾರಿಗೆ ಪ್ರಣಯಿಗಳಾಗಿ ಅಭಿನಯಿಸಿರುವ ಈ ಚಿತ್ರದ ಪಾತ್ರವರ್ಗದಲ್ಲಿ ಲೋಕನಾಥ್, ಸುಮ, ಕೀರ್ತಿ, ಸತ್ಯಜಿತ್ ದತ್ತಾತ್ರೇಯ, ಡಿಂಗ್ರಿನಾಗರಾಜ್, ವಿಜಯಾ ಸೋಮಣ್ಣ, ಧನುಸುವರ್ಣ, ಕೆ. ವಿಜಯ, ಮೈಸೂರು ಲೋಕೇಶ್ ಇದ್ದಾರೆ. ಲೋಕೇಶ್ ಅತಿಥಿ ಪಾತ್ರದಲ್ಲಿದ್ದಾರೆ,

ಸದ್ಯದಲ್ಲಿಯೇ ಚಿತ್ರವು ಸೆನ್ಸಾರ್ ಮಂಡಳಿಯ ಮುಂದೆ ಪ್ರದರ್ಶನವಾಗಲಿದೆ.



'ಮಾಧುರಿ' ವಿನೋದ್ ಆಳ್ವ, ಮತ್ತು ಗೀತಾ

'ಸತಿಯ ಕಾಟ' ಸಾಹಿತಿಯ ಪರದಾಟ

ಚಲನಚಿತ್ರರಂಗದ ಪ್ರಖ್ಯಾತ ಸಾಹಿತಿ ಸುಧಾಕರನಿಗೆ, ನಿರ್ಮಾಪಕರ‍್ಯಾರು ಅಟ ಕಾಯಿಸಿಕೊಂಡಿದ್ದರು. ಅವರಲ್ಲೊಬ್ಬ ಸಾಹಿತಿಗೆ "ಸಿಲ್ವರ್ ಜ್ಯೂಬಿಲಿ ಚಿತ್ರದಿಂದ ಫ್ಲಾಪ್ ಚಿತ್ರದ ವರೆಗೂ ನೀನು ಕಥೆ ಬರೆಯೋದರಿಂದ, ನಿನ್ನನ್ನು ಬಿಟ್ಟು ಬೇರೆಯವರಿಂದ ಕಥೆ ಬರೆಸಬಾರದೂಂತ ತೀರ್ಮಾನ ಮಾಡಿ, ಈಗಾಗಲೇ ಶೂಟಿಂಗ್ ದಿನ ನಿಗದಿಪಡಿಸಲಾಗಿದೆ. ಕಾಲ್‌ಶೀಟ್ ಕೂಡ ತಗೊಂಡು ಇನ್ನೊಂದು ವಾರದಲ್ಲಿ ಚಿತ್ರೀಕರಣ ಪ್ರಾರಂಭಿಸಬೇಕು ಅಂತಿದ್ರೆ, ನೀನಿನ್ನೂ ಚಿತ್ರಕಥೆನೇ ಬರೆದಿಲ್ಲ" ಎಂದಾಗ ಇನ್ನೊಬ್ಬ ನಿರ್ಮಾಪಕ "ಯಾಕೆ ಮಿಸ್ಟರ್ ಸುಧಾಕರ್ ಇತ್ತೀಚೆಗೆ ನೀವು ಬರೆದ ಕಥೆಗಳೆಲ್ಲಾ ಸೋಲ್ತಾ ಇದೆ? ಮೊದಲು ನಿಮ್ಮ ಚಿತ್ರದ ಬಿಡುಗಡೆ ಅಂದ್ರೆ ಜನಗಳು ಎಷ್ಟು ಕಾತುರದಿಂದ ಕಾಯ್ತಾ ಇದ್ರು, ಈಗ ಏನಾಗಿದೆ ನಿಮಗೆ ಎಂದು ಕೇಳಿದಾಗ ಸಾಹಿತಿ ಸುಧಾಕರ್ "ನಾನೇನು ಮಾಡಲಿ ಸಾರ್ ನನಗೆ ಒಳ್ಳೆ ಮೂಡ್ ಬರೋ ವೇಳೆಯಲ್ಲೇ, ನನ್ನ ಹೆಂಡತಿಯಿಂದಲೇ ತೊಂದರೆ ಉಂಟಾಗುತ್ತೆ. ಅಲ್ಲಿ ಹೋಗೋಣ, ಇಲ್ಲಿ ಹೋಗೋಣ ಅಂತ ಅತ್ತು ಕರೆದು ಹಠ ಹಿಡಿದು ರಂಪ ಮಾಡುತ್ತಾಳೆ. ಅವಳ ಕಾಟದಿಂದ ನನಗೆ ಕಥೆ ರಚಿಸೋದಿಕ್ಕೆ ಸ್ಫೂರ್ತಿನೇ ಸಿಗ್ತಾ ಇಲ್ಲ" ಎಂದು ಪರಿತಪಿಸುತ್ತಾನೆ ನಿರ್ಮಾಪಕರಲ್ಲೊಬ್ಬ "ಅಲ್ಲಯ್ಯ ಯಾವಾಗ ನೋಡಿದರೂ ನಿನಗೂ, ನಿನ್ನ ಹೆಂಡ್ತಿಗೂ ಜಗಳಾನೇ ಆಯ್ತಲ್ಲ. ನೀನು ಮನೆಗೆ ಹೋದ್ರೆ ತಾನೇ ಹೆಂಡತಿಯ ಕಾಟ. ಒಂದು ಕೆಲಸ ಮಾಡು, ನೀನು ಯಾರಿಗೂ ಹೇಳದೆ, ನಮ್ಮ ಫಾರಂ ಹೌಸ್‌ಗೆ ಹೋಗು ಅಲ್ಲಿ ನಿನಗೆ ಯಾವ ತಂಟೆ ತಕರಾರು ಇರೋಲ್ಲ, ನಿನ್ನ ಹೆಂಡತಿ ಏನಾದರೂ ಕೇಳಿದರೆ ನಾನು ಜವಾಬು ಕೊಡುತ್ತೇನೆ. ಒಟ್ಟಿನಲ್ಲಿ ನೀನು ನನಗಾಗಿ ಬರಿತಿರೋ ಕ್ರೈಮ್, ಸೆಕ್ಸ್ ಕಥೆ ಹಿಂದೆ ಬಂದಿರಬಾರದು, ಮುಂದೆ ಬರಬಾರದು. ಇತ್ತೀಚಿನ ಚಿತ್ರಗಳಲ್ಲಿ ನೀನು ಕಳೆದುಕೊಂಡಿರೋ ಖ್ಯಾತಿ ಮತ್ತೆ ಪಡಿಲೇಬೇಕು" ಎನ್ನುತ್ತಾ, ಸಾಹಿತಿಯನ್ನು ಫಾರಂ ಹೌಸ್‌ಗೆ ಸಾಗಿಸುತ್ತಾನೆ.

ಈ ದೃಶ್ಯವನ್ನು ತುಳು ಮತ್ತು ಕನ್ನಡದಲ್ಲಿ ಏಕಕಾಲದಲ್ಲಿ ನಿರ್ಮಾಣಗೊಳ್ಳುತ್ತಿರುವ "ರಾತ್ರಿಪಗಲ್" ಹಾಗೂ "ರಾತ್ರಿ ಹಗಲು" ಚಿತ್ರಕ್ಕಾಗಿ ನಿರ್ದೇಶಕ ಕೋಡ್ಲು ರಾಮಕೃಷ್ಣ ಚಿತ್ರೀಕರಿಸಿಕೊಂಡರು



ವಿಚಿತ್ರಾಯಣ



'ಒಂಟಿಸಲಗ' ಅಂಬರೀಷ್, ಖುಷ್‌ಬೂ

ಮತ್ತೊಮ್ಮೆ ಗುಂಡು ಹಾರಿಸಿ

'ಜನಮ' ಅಂದರೆ ಜನ ನಾಟ್ಯ ಮಂಚದ ಎಲ್ಲ ನಾಟಕಗಳೂ ಜನರ ನೋವಿನ ಕುರಿತಾಗಿದ್ದವು. ಆ ನಾಟಕಗಳ ಎಲ್ಲ ಪಾತ್ರಗಳೂ ಮುಂದೆ ಒದಗಲಿರುವ ದುರಂತದ ಕುರಿತಾದ ಮುನ್ಸೂಚನೆಗಳನ್ನು ನೀಡುತ್ತಿದ್ದವು. 'ಜನಮ' ಪ್ರದರ್ಶಿಸುತ್ತಿದ್ದ ಯಶಸ್ವೀ ನಾಟಕ 'ಹತ್ಯಾರೇ' (ಕನ್ನಡದಲ್ಲಿ ಇದೇ ನಾಟಕ 'ಅಲಿಫರ್' ಹೆಸರಿನಲ್ಲಿ ಹಲವು ಪ್ರದರ್ಶನಗಳನ್ನು ಕಂಡಿದೆ) ನಾಟಕದ 'ಬಾಡಿಗೆ ಗೂಂಡಾ' ಪಾತ್ರಧಾರಿ ಹೇಳುತ್ತಾನೆ–

"ಯಾರು ನನ್ನನ್ನು ಕರೆದದ್ದು? ಇನ್ನೊಮ್ಮೆ ಕರೆಯಿರಿ... ಯಾರ ಮನೆ ಹಂಚು ಪುಡಿಮಾಡ್ಬೇಕು... ಯಾರ ಅಂಗಡಿ ಬೀಗ ಒಡೀಬೇಕು... ಯಾರ ಮನೆ ಹುಡುಗೀನ ಎತ್ಕೊಂಡು ಬರ್ಬೇಕು... ಹಿಂದೂಗಳನ್ನು ಮುಸ್ಲಿಮರಿಂದ ಕೊಲ್ಲಿಸ್ಬೇಕಾ ಅಥವಾ ಮುಸ್ಲಿಮರನ್ನು ಹಿಂದೂಗಳಿಂದ ಕೊಲ್ಲಿಸ್ಬೇಕಾ...? ಯಾವ ಕೆಲಸ ಬೇಕಾದ್ರೂ ಚಿಟಿಕೆ ಹೊಡೆಯೋ ಹೊತ್ತಿನಲ್ಲಿ ಮಾಡಿ ಮುಗಿಸ್ತೇನೆ. ಆದರೆ ಪೂರ್ತಿ ಚಾರ್ಜು ಕೊಡ್ಬೇಕಾ ಗುತ್ತೆ .. ಪೂರ್ತಿ ಚಾರ್ಜು..."

ನಾಟಕದ ಪಾತ್ರಧಾರಿಯ ಮಾತುಗಳು ನಿಜವಾದವು. ನಾಟಕ ಪ್ರದರ್ಶನ ನೀಡುತ್ತಿದ್ದ ಸಂದರ್ಭದಲ್ಲಿಯೇ ಬಾಡಿಗೆ ಗೂಂಡಾಗಳಿಂದ ಹಲ್ಲೆಗೀಡಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟ ರಾಷ್ಟ್ರದ ಖ್ಯಾತ ರಂಗನಟ, ಬೀದಿ ನಾಟಕ ಚಳವಳಿಯ ನೇತಾರ ಸಫ್ದರ್ ಹಶ್ಮಿ ಮೃತ್ಯುವಿಗೀಡಾದರು. ಪ್ರಜ್ಞಾವಂತ ನಾಗರಿಕರೆಲ್ಲರೂ ನಾಚಿ ತಲೆ ತಗ್ಗಿಸಬೇಕಾದಂತಹ ಕ್ರೂರಕೃತ್ಯವು ಉದ್ದೇಶ ಪೂರ್ವಕವಾಗಿಯೇ ನಡೆದು ಹೋಯಿತು...

ರಂಗ ಚಳವಳಿಗೆ ಹೊಸ ಭಾಷೆಯನ್ನು ನೀಡುವಲ್ಲಿ 'ಜನಮ'ದ ಪಾತ್ರ ಮಹತ್ವದ್ದಾದದ್ದು... 1973ರ ಸೆಪ್ಟೆಂಬರ್‌ನಲ್ಲಿ ದೆಹಲಿಯ ಬಂಗಾಳಿ ಮಾತನಾಡುವ ಪ್ರದೇಶದಲ್ಲಿನ ತಾತ್ಕಾಲಿಕ ಸಭಾಂಗಣದ ಮೇಲೆ ಉತ್ಪಲದತ್ತರ 'ಮೃತ್ಯೂರ್ ಊಡಿತ್' ಎಂಬ ಬಂಗಾಳಿ ನಾಟಕವನ್ನು ಪ್ರದರ್ಶಿಸುವುದರ ಮೂಲಕ ನಾಟಕರಂಗವನ್ನು ಪ್ರವೇಶಿಸಿದ 'ಜನಮ' ಮುಂದೆ ತುರ್ತು ಪರಿಸ್ಥಿತಿಯವರೆಗೂ ಹಲವು ರಂಗನಾಟಕಗಳನ್ನು ನಾಟಕ ಮಂದಿರಗಳಲ್ಲಿ ಕೈಗಾರಿಕಾ ಪ್ರದೇಶಗಳಲ್ಲಿ, ಮಧ್ಯಮ ವರ್ಗದ ಬಡಾವಣೆಗಳಲ್ಲಿ ಪ್ರದರ್ಶಿಸುತ್ತಿದ್ದಿತು. ತುರ್ತು ಪರಿಸ್ಥಿತಿಯ ಬಳಿಕ ತನ್ನ ನಾಟಕಗಳನ್ನು ಪ್ರದರ್ಶಿಸಲು ಆರ್ಥಿಕವಾಗಿ ಅಸಮರ್ಥವಾದ 'ಜನ ನಾಟ್ಯ ಮಂಚ' ಹೊಸ ಮಾರ್ಗವನ್ನೇ ರೂಪಿಸಿಕೊಂಡಿತು.

1988ರ ದುರಂತಗಳ ಪಟ್ಟಿಯನ್ನು ಎಲ್ಲ ಪತ್ರಿಕೆಗಳೂ ವರ್ಷ ಮುಗಿದಾಕ್ಷಣವೆ ಪ್ರಕಟಿಸಿವೆ. 1989 ಬಾಗಿಲು ತೆರೆದ ಮೊದಲ ವಾರದಲ್ಲೇ ಮತ್ತೊಂದು ದುರಂತ ನಮ್ಮೆದುರು ಸಂಭವಿಸಿದೆ. ಅದು ಸಫ್ದರ್ ಹಶ್ಮಿಯ ಕಗ್ಗೊಲೆ.

ಬೀದಿನಾಟಕ ಆಡುತ್ತಿದ್ದ ಹಶ್ಮಿ ಗೆಳೆಯರ ಗುಂಪನ್ನು ದಿಲ್ಲಿಯ ಪುಢಾರಿಯೊಬ್ಬನ ಬಾಡಿಗೆ ಗೂಂಡಾ ಪಡೆ ಬೆನ್ನಟ್ಟಿ ಓಡಿಸಿ ಮಚ್ಚಿನಿಂದ ಕಡಿದು ಕೊಂದ ಘಟನೆ- ಈ ದೇಶ ಎತ್ತಸಾಗುತ್ತಿದೆಯೆಂಬುದರ ದಿಕ್ಸೂಚಿ. ಶೋಷಣೆಯ ವಿರುದ್ಧ ಧರ್ಮಯುದ್ಧದಲ್ಲಿ ಪ್ರಾಣ ಬಲಿಕೊಟ್ಟ ಹಶ್ಮಿಯ ಬಗ್ಗೆ ಇದೊಂದು ಸ್ಮರಣೆ.

ಜನಪರ ಬೀದಿನಾಟಕ ಚಳವಳಿಯ ಮುಖ್ಯ ಕಾರ್ಯಕರ್ತ, ಮಾನವ ಹಕ್ಕುಗಳ ರಕ್ಷಣೆಗಾಗಿ ಅವುಗಳನ್ನು ಜನರ ಬಳಿಗೆ ಕೊಂಡೊಯ್ದು ತಿಳಿಯಪಡಿಸುತ್ತಿದ್ದ ನಿರಂತರ ಹೋರಾಟಗಾರ ಸಫ್ದರ್‌ಹಶ್ಮಿ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಶಾಲಾ ಕಾಲೇಜು ದಿನಗಳಲ್ಲಿಯೇ ಸಕ್ರಿಯ ರಂಗ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದ ಸಫ್ದರ್ ತನ್ನ ಗೆಳೆಯರೊಂದಿಗೆ ಜನ ನಾಟ್ಯ ಮಂಚ ತಂಡವನ್ನು ಹುಟ್ಟು ಹಾಕಿ 14 ವರ್ಷಗಳಿಂದಲೂ ಬೀದಿನಾಟಕಗಳನ್ನು ಪ್ರದರ್ಶಿಸುತ್ತಾ ರಾಷ್ಟ್ರದ ಎಲ್ಲೆಡೆಯ ರಂಗ ಕಲಾವಿದರ ಅಭಿಮಾನಿಗಳಿಗೆ ಪಾತ್ರರಾದವರು.

1983ರಲ್ಲಿ ಭೋಪಾಲಿನಲ್ಲಿ ನಡೆದ ಬೀದಿನಾಟಕ ಕಾರ್ಯಾಗಾರದ ಶಿಬಿರಾರ್ಥಿಯಾಗಿ ಬಂದಿದ್ದ ಸಫ್ದರ್ ನಮ್ಮೊಂದಿಗೆ ಹೇಳಿದ್ದರು... "ಜನರ ನೋವು ನಲಿವುಗಳಿಗೆ ಪ್ರತಿಸ್ಪಂದಿಸಬೇಕಾಗಿರುವ ಬೀದಿನಾಟಕದ ಸ್ಕ್ರಿಪ್ಟ್ ರಚನೆ ಒಬ್ಬ ಲೇಖಕನದ್ದಾಗಬೇಕಾಗಿಲ್ಲ. ಹಾಗಾಗಿ ನಾವು 'ಜನಮ'ದ ಸದಸ್ಯರುಗಳು ಒಟ್ಟು ಸೇರಿ ಒಂದು ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸುತ್ತೇವೆ. ಬಳಿಕ ಅದಕ್ಕೆ ಕಲಾತ್ಮಕ ರೂಪ ಬರುವಂತೆ ಸ್ಕ್ರಿಪ್ಟ್ ರಚಿಸುತ್ತೇವೆ. ಹಲವು ಸಮಾನ ಮನಸ್ಕರ ಯೋಚನೆಗಳು ಇಲ್ಲಿರುವುದರಿಂದ ನಮ್ಮ ಹೆಚ್ಚಿನ ನಾಟಕಗಳು ಮೌಲಿಕವೂ ಕಲಾತ್ಮಕವೂ ಜನಪರವೂ ಆಗಿ ಉಳಿದುಕೊಂಡಿದೆ."

ಹೌದು! ವಿಷಯವನ್ನು ಹೇಳಿಬಿಟ್ಟರೆ ಸಾಕು ಎನ್ನುವ ನಿರ್ಲಕ್ಷ್ಯತನ ಜನಮದ ನಾಟಕಗಳಲ್ಲಿ ಎಂದೂ ಕಾಣಿಸಿಕೊಂಡದ್ದಿಲ್ಲ. ನಾಟಕದ ಕಲಾತ್ಮಕ ಅಂಶಗಳನ್ನು ಇವರೆಂದೂ ನಿರ್ಲಕ್ಷಿಸಿದ್ದಿಲ್ಲ. 'ಜನಮ'ದ ನಾಟಕಗಳು ಸರಳವಾಗಿ ನಿರ್ಮಲವಾಗಿರುತ್ತವೆ. ಹುರುಪಿನಿಂದ ಮನರಂಜನೆಯನ್ನು ಒದಗಿಸುತ್ತದೆ. ಭಾವನೆಗಳನ್ನು ಕಲಕುತ್ತವೆ ಮತ್ತು ಸಹಜವಾಗಿರುತ್ತವೆ. ಹೀಗಾಗಿ ಗ್ರಾಮೀಣ ಹಾಗೂ ನಗರದ ಎಲ್ಲ ಪ್ರೇಕ್ಷಕರಿಗೂ ಇವುಗಳು ಪ್ರಿಯವಾಗುತ್ತವೆ.

ಪರ್ಚೆಲ್ಲದೆ ಜನರನ್ನು ನೇರವಾಗಿ ತಲುಪಬಲ್ಲ ನಾಟಕಗಳು ಬೇಕೆಂದು ತೀರ್ಮಾನಿಸಿದ ಜನಮದ ಸದಸ್ಯರು ಒಟ್ಟಾಗಿ ರೂಪಿಸಿದ ಮೊದಲ ನಾಟಕ ಕೈಗಾರಿಕಾ ಬಾಂಧವ್ಯವನ್ನು ಕುರಿತಾದ 'ಮಶೀನ್' ಎಂಬ ಬೀದಿ ನಾಟಕ. 1978ರ ನವೆಂಬರ್‌ನಲ್ಲಿ ಕೈಗಾರಿಕಾ ಬಾಂಧವ್ಯ ಮಸೂದೆಗೆ ವಿರುದ್ಧವಾಗಿ ನಡೆದ ರ್‍ಯಾಲಿಯಲ್ಲಿ ಹದಿಮೂರು ನಿಮಿಷಗಳ 'ಮಶೀನ್' ನಾಟಕ ಪ್ರದರ್ಶಿಸಿದಾಗ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಜನ ನೋಡಿದರು...

ಐ ಕೆ ಬೊಳುವಾರು

ಅಂದಿನಿಂದ ಇಲ್ಲಿಯ ವರೆಗೆ 'ಜನಮ' ಬಹಳಷ್ಟು ಹೊಸ ನಾಟಕಗಳನ್ನು ರಚಿಸಿ ರಾಜಧಾನಿಯಲ್ಲಲ್ಲದೆ ರಾಷ್ಟ್ರದ ಬೇರೆ ಬೇರೆ ಸ್ಥಳಗಳಲ್ಲಿ ಪ್ರದರ್ಶಿಸಿದೆ. ದೆಹಲಿ ಸಾರಿಗೆ ಸಂಸ್ಥೆಯ ಪ್ರಯಾಣ ದರ ಏರಿಕೆಯ ಕುರಿತಾದ 'ಡಿ. ಟಿ. ಸಿ ಕೀ ಧಾಂದಲೀ' ಕೋಮುಗಲಭೆಯ ಪರಿಣಾಮಗಳನ್ನು ನಿಷ್ಠುರವಾಗಿ ಹೇಳುವ 'ಹತ್ಯಾರೇ' ಮಹಿಳೆಯರ ಮೇಲಾಗುತ್ತಿರುವ ಶೋಷಣೆಯ ಕುರಿತಾದ 'ಔರತ್' ಪೊಲೀಸ್ ದೌರ್ಜನ್ಯದ ಬಗ್ಗೆ ತಿಳಿಯಪಡಿಸುವ 'ಪೊಲೀಸ್ ಚರಿತ್ರಂ' ನಿರುದ್ಯೋಗ ಸಮಸ್ಯೆಯ 'ಗಾಂವ್‌ಸೆ ಶಹರ್‌ತಕ್' ಚುನಾವಣಾ ಅವ್ಯವಹಾರಗಳನ್ನು ಗೇಲಿಮಾಡುವ 'ಆಯಾ ಚುನಾವ್' ಮುಂತಾದ ನಾಟಕಗಳು ಜನ ನಾಟ್ಯ ಮಂಚಕ್ಕೆ ಹೆಸರು ಹಾಗೂ ಜನಪ್ರಿಯತೆಯನ್ನು ತಂದುಕೊಟ್ಟವೆ.

ಸಫ್ದರ್‌ನ ಬದುಕಿನ ಸಂಗಾತಿ ಮೊಲೋಯ್‌ಶ್ರೀ ಹಶ್ಮಿ ಹೇಳುತ್ತಾರೆ. "ಸಫ್ದರ್‌ಗೆ ಗೊತ್ತಿತ್ತು–ಹಿಂಸೆಯ ಜಗತ್ತಿನಲ್ಲಿ ಯಾವನೇ ಒಬ್ಬ ಬದುಕಿ ನೋವು ಅನುಭವಿಸುತ್ತಿದ್ದರೂ ಅದು ಎಲ್ಲರ ಬದುಕೇ ಆಗಿರುತ್ತದೆ ಎಂದು. ಹಾಗಾಗಿ ಆತ ಖಾಸಗಿ ಬದುಕಿನ ಅಪಾಯಗಳ ಬಗ್ಗೆ ಯಾವತ್ತೂ ತಲೆಕೆಡಿಸಿಕೊಂಡದ್ದೇ ಇಲ್ಲ. ಆತನ ಚಿಂತನೆ ಕೆಳವರ್ಗದವರ ಅನ್ಯಾಯಕ್ಕೊಳಗಾದವರ, ರೈತ ಕಾರ್ಮಿಕರ ಬಗ್ಗೆ ಮಾತ್ರ ಆಗಿತ್ತು."

ರಂಗಕರ್ಮಿಯೊಬ್ಬನ ಹತ್ಯೆಯಿಂದಾಗಿ ಒಟ್ಟು ರಂಗಚಳವಳಿ ಅಥವಾ ಜನಪರ ಹೋರಾಟಗಳು ನಿಂತು ಹೋಗುತ್ತವೆ ಎಂದು ಯಾರೂ ತಿಳಿಯಬೇಕಾಗಿಲ್ಲ. ಒಬ್ಬ ಸಫ್ದರ್‌ನ ಬದಲಾಗಿ ಸಾವಿರ ಸಫ್ದರ್‌ಗಳು ಜನಪರ ರಂಗ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಏಕೆಂದರೆ ಜನ ನಾಟ್ಯ ಮಂಚದ ಮೊದಲ ಬೀದಿ ನಾಟಕ 'ಮಶೀನ್'ನ ಕೊನೆಯಲ್ಲಿ ಬರುವ ಆಶಯದ ಮಾತುಗಳೂ ಅದೇ ಆಗಿದ್ದವು.

(ಕನ್ನಡದಲ್ಲಿ, ಯಂತ್ರಗಳು, ನಾಟಕವಾಗಿ ಪ್ರದರ್ಶನಗೊಂಡಿದೆ)

"ಇನ್ನೊಮ್ಮೆ ಹಾರಿಸು ಗುಂಡು... ಗುಂಡಿನ ಬೆಂಕಿ ಮಳೆ ಸುರೀತಾನೇ ಇರಲಿ... ಆದರೆ ಈ ಬೆಂಕಿಯಿಂದ ಪ್ರತಿಭಟನೆಯ ಬೆಂಕಿ ಎಂದೂ ನಂದಲಾರದು. ಬದಲಾಗಿ ಇನ್ನಷ್ಟು ಹೆಚ್ಚಾದೀತು. ಒಬ್ಬ ಸತ್ತರೆ ಹತ್ತು ಜನ ಬಂದಾರು. ಹತ್ತು ನೂರಾದೀತು. ನೂರು ಸಾವಿರ ಲಕ್ಷ ಕೋಟಿ ಕೋಟಿಗಳಾಗಿ ಎದ್ದುಬಂದಾರು......"

ಹೊಸಹೊತ್ತಗೆ

ಕೋಳಿ ಸಾಕಣೆಯ ಮಾರ್ಗದರ್ಶಿ
ಲೇ: ಪ್ರೊ॥ ಪಿ. ಎ. ಭಟ್ಟ ಎ. ವಿ. ಬಾಳಿಗಾ ವಾಣಿಜ್ಯ ಮಹಾವಿದ್ಯಾಲಯ ಕುಮಟಾ, ಉ. ಕ.
ಪ್ರ. ಜಯಪ್ರಭಾ ಪಬ್ಲಿಶರ್ಸ್ ಬೆಲೆ ರೂ. 50/-

ಕಾಣಿಕೆ (ಕಿರಿಯರಿಗಾಗಿಕಥೆ)
ಲೇ: ಯೋಶೋದಾ ಜೆನ್ನಿ-
ಪ್ರ: ಸಂದೀಪ ಸಾಹಿತ್ಯ ಪ್ರಕಾಶನ
ಅತ್ರಾಡಿ, ಉಡುಪಿ ಬೆಲೆ ರೂ. 5/-

ನಾವು ಪ್ರಾಮಾಣಿಕರೆ? (ಕವನ ಸಂಕಲನ)
ಲೇ: ಚಂದ್ರಕಲಾ ನಂದಾವರ
ಪ್ರ: ಹೇಮಾಂಶು ಪ್ರಕಾಶನ
ಕಾಟಿಪಳ್ಳ 574149 ಪುಟ: 32 ಬೆಲೆ ರೂ. 10/-

ತಂತ್ರ ಮಂತ್ರ ಪರಿಚಯ
ಲೇ: ರಸಿಕ ಪುತ್ತಿಗೆ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ
ಪುಸ್ತಕ ಪ್ರಕಾಶನ ಮಾಲೆ ಉಜಿರೆ 574240
ಪುಟ :142 ಬೆಲೆ ರೂ. 15/-

ಕವನ ಕುಸುಮ (ಕವನ ಸಂಕಲನ)
ಲೇ: ಯು. ಬಿ. ಬಳ್ಕೂರ್
ಪ್ರ: ಯುಗಪುರುಷ ಪ್ರಕಟನಾಲಯ
ಕಿನ್ನಿಗೋಳಿ 574150 ಪುಟ: 34 ಬೆಲೆ ರೂ. 5/-

ಡಿ. ವಿ. ಜಿ. ಯವರ ಜೀವನ ಧರ್ಮಯೋಗ
ಡಾ॥ ಗುಂಡ್ಮಿ ಚಂದ್ರಶೇಖರ ಐತಾಳ
ಶ್ರೀ. ಧ. ಮಂ. ಪು. ಪ್ರ. ಮಾಲೆ, ಉಜಿರೆ.
ಪುಟ: 78 ಬೆಲೆ ರೂ. 8/-

ಬಣ್ಣದ ವೇಷ ಮತ್ತು ಇತರಉಪನ್ಯಾಸಗಳು
ಲೇ: ಮುಳಿಯ ಮಹಾಬಲ ಭಟ್ಟ
ಪ್ರ: ಮುಳಿಯ ಮಹಾಬಲ ಭಟ್ಟ
4—6—630, ಕರಂಗಲಪಾಡಿ
ಮಂಗಳೂರು 575003 ಪುಟ:82 ಬೆಲೆ ರೂ. 15/-

ಸವಾಲು

ವ್ಯವಸ್ಥೆಯ ವಟವೃಕ್ಷಗಳೇ,
ನಿಮ್ಮ ಬೇರುಗಳಾಳ
ಕಂಡುಕೊಂಡಿದ್ದೇವೆ
ನಿಮ್ಮ ಮರಣದ ಕೊಡಲಿ
ಕೊಂಡುಕೊಂಡಿದ್ದೇವೆ.

ಸಜ್ಜಾಗಿದೆ ಸಜ್ಜಾಗಿದೆ ಸಜ್ಜಾಗಿದೆ ನೋಡಿ
ಬಾಯಿಲ್ಲದೆ ಬಾಳಿಲ್ಲದೆ ಬಿದ್ದಿಹ ಪರನಾಡಿ
ನಮ್ಮ ಕನಸಿನ ಬಳ್ಳಿ ಪಲ್ಲವಿಸದಂಥ
ನಿಮ್ಮ ಸಂಜೆಯ ನೆರಳು
ನಮ್ಮ ಬೆವರಿನ ಅನ್ನಕ್ಕಿಂಬಿಲ್ಲದಂಥ

ಹಿಕಮತ್ತಿನ ಉರುಳು
ಸಾಲಿ ಕಲಿತಿದ್ದೇವೆ
ಶಾಣ್ಯಾರಾಗಿದ್ದೇವೆ
ಅರ್ಥವಾಯಿತೆ ಸ್ವಾಮಿ ?
ತಲ್ಲಣಿಸುತಿದೆ ಭೂಮಿ !

ಸಜ್ಜಾಗಿದೆ ಸಜ್ಜಾಗಿದೆ ಸಜ್ಜಾಗಿದೆ ಹಿಂಡು
ಬಾಯಿಲ್ಲದೆ ಬಾಳಿಲ್ಲದೆ ಬಿದ್ದವರ ದಂಡು
ಹುಟ್ಟುತಲೆ ಅಂತಸ್ತು ಕೈಂಕರ್ಯ ಕಲಿಸಿದಿರಿ
ಅಂತ:ಸತ್ವವ ಕೊಂದು ಪಡಪೋಸಿ ಮಾಡಿದಿರಿ
ನೀವಿಟ್ಟ ಎಂಜಲೆಲೆ ನೆಕ್ಕುತ್ತ ನೆಕ್ಕುತ್ತ
ಬಾಳುವುದ ಕಲಿಸಿದಿರಿ ಬಿಕ್ಕುತ್ತ ಬಿಕ್ಕುತ್ತ.

ಮಾನವತೆ ಕೊಂದವರೆ
ನೀತಿಯನು ತಿಂದವರೆ
ಕರಗದೆ ಮರುಗದೆ
ಸೊಕ್ಕಿದವರೆ ಸೊಕ್ಕಿದವರೇ

ಸಜ್ಜಾಗಿದೆ ಸಜ್ಜಾಗಿದೆ ಸಜ್ಜಾಗಿದೆ ಕೋಲು
ಕ್ರಾಂತಿಯ ಹಿಲಾಲು ಒಡ್ಡಿದೆ ಸವಾಲು !

—ವಿಷ್ಣು ನಾಯ್ಕ

ವಾರದ ಚಿತ್ರ

ನಿರೀಕ್ಷೆ

ಚಿತ್ರ: ಕೇಶವ ವಿಟ್ಲ

ಕೊಳಲಿನ ಧ್ವನಿ

ಒಂದೂರಲ್ಲಿ ಗೋಪಾಲನೆಂಬ ಹುಡುಗನಿದ್ದ. ದನಗಳ ಹಿಂಡನ್ನು ಕಾಡಿಗೆ ಕರೆದುಕೊಂಡು ಹೋಗಿ ಮೇಯಿಸಿಕೊಂಡು ಬರುವ ಕೆಲಸ ಅವನದಾಗಿತ್ತು. ಕೊಳಲು ಊದುವುದು ಅವನ ವಿಶಿಷ್ಟ ಹವ್ಯಾಸವಾಗಿತ್ತು. ಬಿದಿರಿನ ಜಾತಿಯ ಓಟೆಯನ್ನು ತಂದು ಅದಕ್ಕೆ ತೂತು ಕೊರೆದು ಇಂಪಾಗಿ ಸ್ವರ ಬರಿಸುತ್ತಿದ್ದ. ಅವನ ಕೊಳಲಿನ ಧ್ವನಿಗೆ ಮರುಳಾದ ದನಗಳು ಅವನನ್ನು ಬಿಟ್ಟು ದೂರ ಹೋಗುತ್ತಿರಲಿಲ್ಲ. ಕೊಳಲಿನ ನಾದವನ್ನು ಆಲಿಸುತ್ತಾ ಅಕ್ಕಪಕ್ಕದಲ್ಲಿರುವ ಹುಲ್ಲನ್ನು ಮೇಯುತ್ತಿದ್ದವು.

ಆ ಕಾಡಿನಲ್ಲಿ ದನಗಳ ಬೇಟೆಗಾಗಿ ಹೊಂಚು ಹಾಕುತ್ತಿದ್ದ ಒಂದು ಹುಲಿಗೆ ಗೋಪಾಲನ ಕೊಳಲು ಅಡ್ಡಿಯಾಗಿತ್ತು. ಒಂದು ದಿನ ಗೋಪಾಲನು ಮರದ ಕೊಂಬೆಯಲ್ಲಿ ಕುಳಿತು ಕೊಳಲು ಬಾರಿಸುತ್ತಿರುವಾಗ ಹುಲಿಯು ಅವನ ಬಳಿಗೆ ಬಂದು "ಏ ಹುಡುಗಾ, ನಿನ್ನ ಕೊಳಲಿನ ಧ್ವನಿ ಬಹಳ ಇಂಪಾಗಿದೆ. ನನಗೂ ಒಂದು ಕೊಳಲು ಮಾಡಿಕೊಡು" ಎಂದು ಕೇಳಿತು. ಹುಲಿಯನ್ನು ಕಂಡು ಅಂಜಿದ ಗೋಪಾಲ "ಹುಲಿರಾಯ, ನೀನು ನನ್ನನ್ನು ತಿನ್ನಲೋಸುಗ ಈ ನಾಟಕ ಆಡುತ್ತಿರುವೆ" ಎಂದು ಹೇಳಿದಾಗ ಹುಲಿಯು ತನ್ನ ಕೆನ್ನೆಗಳಿಗೆ ಹೊಡೆದುಕೊಳ್ಳುತ್ತಾ ಪರಿಪರಿಯಾಗಿ ಹೇಳಿ ಅವನನ್ನು ನಂಬಿಸಿತು. ಕೊನೆಗೆ ಗೋಪಾಲನು "ಆ ಪೊದೆಯಿಂದ ಒಂದಿಷ್ಟು ಓಟೆಯನ್ನು ಕಿತ್ತುಕೊಂಡು ಬಾ" ಎಂದು ಹೇಳಿದ. ಹುಲಿಯು ಸಂತೋಷದಿಂದಲೇ ಓಟೆಯ ಬಳಿಗೆ ಹೋಯಿತು. ತನ್ನೆರಡು ಕೈಗಳನ್ನು ಉಪಯೋಗಿಸಿ ಒಂದು ಓಟೆಯನ್ನು ಜೋರಾಗಿ ಎಳೆಯಿತು. ಸಿಗಿದು ಹೋದ ಓಟೆಯು ಚಾಕುವಿನಂತೆ ಹುಲಿಯ ಕೈಯನ್ನು ಸಿಗಿಯಿತು.

ಸಿಟ್ಟುಗೊಂಡ ಹುಲಿಯು ಇನ್ನೂ ಜೋರಾಗಿ ಎಳೆದಾಗ ಅದರ ಕೈ ಇನ್ನೂ ಗಾಯವಾದಂತಾಗಿ ಧಾರಾಕಾರವಾಗಿ ರಕ್ತ ಸುರಿಯತೊಡಗಿತು. ನೋವನ್ನು ತಾಳಲಾರದ ಹುಲಿಯು ಅಲ್ಲಿಂದ ಓಟಕಿತ್ತಿತು.

ಇಂದಿಗೂ ಕೊಳಲಿನ ಧ್ವನಿಯನ್ನು ಕೇಳಿದಾಗ ಹುಲಿ ಓಡಿ ಹೋಗುತ್ತದೆ.

—ಜೆ. ರಾಮಣ್ಣ ಅಲೆಟಿ



ನಾವು ಭಾವೀ ಪ್ರಜೆಗಳು

ತ್ಯಾಗದ ಕೀರ್ತಿಯು
ಸುಖ ಸಮೃದ್ಧಿಯು
ದ್ಯೋತಕ ನಮ್ಮಯ ಬಾವುಟವು
ಕೇಸರಿ ಬಿಳಿ ಹಸಿರು ಬಣ್ಣವದು
ಭಾರತ ಮಾತೆಗೆ ಪ್ರಿಯಕರವು
ನಾವು ಭಾರತ ಮಾತೆಯ ಮುದ್ದಿನ ಚಿಣ್ಣರು
ನಮಗೂ ಅದೂ ಒಪ್ಪಿಗೆಯೂ
ನಾವು ಇಂದಿನ ಮಕ್ಕಳು ಭಾವೀ ಪ್ರಜೆಗಳು
ಭಾರತ ಮಾತೆಯ ಸೇವಕರು
ಭಾರತ ದೇಶದ ರಕ್ಷಕರು

—ಧನಲಕ್ಷ್ಮಿ, ಆರ್. ಹೊಳ್ಳ, ವೇಣೂರು

ಮಕ್ಕಳ ತೋಟ

ಚಿಟ್ಟೆ

ಓ ಬಣ್ಣದ ಚಿಟ್ಟೆ
ನಿನ್ನ ಬಣ್ಣವ ನೋಡಿ ನಾ ಸಂತಸ ಪಟ್ಟೆ।
ನಿನ್ನಂತೆ ಹಾರಲು ಯತ್ನಿಸಿ
ನಾ ಸೋತು ಬಿಟ್ಟೆ।
ನಿನ್ನ ಅಂದಕೆ ನಾ ಮರುಳಾಗಿ ಬಿಟ್ಟೆ
ನಿನ್ನಂತೆ ಮಧುವ ಹೀರಲು
ಇದೋ ಹೊರಟೆ॥
ನನಗೂ ಬೇಕು ನಿನ್ನಂತೆ
ಹೂವ ಸವಿಜೇನು।
ಆದರೆ ನಿನ್ನಂತೆ ಹೂವಿಗೆ
ಹಾರಲಾರೆ ನಾನು।
ಸುಮದ ಮಧುವ ಹೀರಲು
ನಿನಗೆ ಮಾತ್ರ ಸಾಧ್ಯವೇನು।
ಬಾ ನನ್ನ ಬಳಿಗೆ ಹಾರಿ ನೀನು॥
ಏಕೆ ಹಾರಾಡುತಿರುವೆ ಅಲ್ಲಿ ಇಲ್ಲಿ
ಬಾ ಕಾದಿರುವೆ ನಾ ನಿನಗಾಗಿ ಇಲ್ಲಿ
ಆಡೋಣ ನಾವು ಜೊತೆಯಾಗಿ ಹೂಬನದಲ್ಲಿ
ನಲಿಯೋಣ ನಾವಿಬ್ಬರೂ ಹರುಷದಲ್ಲಿ॥

—ವಿಜಯಲಕ್ಷ್ಮಿ, ನಿಟ್ಟೂರು



ಹೇಗಿದೆ ನನ್ನ ಅಂಗಿ...?

ಟ್ವಿಂಕಲ್ ಟೈಟಸ್ ಒ್ಯಾಸ್, ಕುಂದಾಪುರ